ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಅವರ ಅಭಿಪ್ರಾಯ ವ್ಯಕ್ತ ಮಾಡುತ್ತಿರತಕ್ಕಂಥದ್ದು ಸರಿಯಾಗಿದ್ದರೂ ಕೂಡ, ನಾನು ಮಾತ್ರ ಇಲ್ಲಿ ಹೇಳುತ್ತೇನೆ, Human rights forum for Dalith liberation ಎಂಬ ಸಂಸ್ಥೆಯ ಸುಮಾರು 400–500 ಜನ ಬೆಳಿಗ್ಗೆಯೇ ನನ್ನ ಮನೆ ಮುಂದೆ ಸತ್ಯಾಗ್ರಹ ಮಾಡುತ್ತಿದ್ದರು...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಿಮ್ಮ ಬಗ್ಗೆ ನಾವು ಹೇಳುತ್ತಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ನಮ್ಮ ಬಗ್ಗೆ ಎಂದಲ್ಲ ವಿಷಯ ತಿಳಿಸಬೇಕಾದುದು ನನ್ನ ಕರ್ತವ್ಯವಾಗಿದೆ. ಆದ್ದರಿಂದ ಅವರಿಗೆ ನಾನು...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ವೈಯಕ್ತಿಕವಾಗಿ ಮಾನ್ಯ ಎಂ.ಪಿ.ಪ್ರಕಾಶ್ ಏಕೆ ಬರಲಿಲ್ಲ ಎಂದು ನಾವು ಕೇಳುತ್ತಿಲ್ಲ. 20 ಡಿಮ್ಯಾಂಡ್ ಇಟ್ಟಿದ್ದೀರಿ, ಆ 20 ಡಿಮ್ಯಾಂಡ್ಸ್‌ಗೆ ಸಂಬಂಧಪಟ್ಟಂತಹ ಇಲಾಖೆ ಮಂತ್ರಿಗಳು ಎಷ್ಟು ಜನ ಇದ್ದಾರೆ ಎಂದು ಮಾತ್ರ ನಾವು ಕೇಳುತ್ತಿದ್ದೇವೆ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಏಕೆ ಬರಲಿಲ್ಲ ಎಂದು ನಾವು ಕೇಳಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ತಾವು ಕೇಳಿರತಕ್ಕಂಥದ್ದು ನಿಜವಾಗಿಯೂ ಕೂಡ ಸರಿಯಾದುದ್ದೇ. ಇದರ ಬಗ್ಗೆ ನನ್ನದೇನೂ ಅಕ್ಷೇಪಣೆ ಇಲ್ಲ. ಆದರೆ ವೈಯಕ್ತಿಕವಾಗಿ ಸ್ಪಷ್ಟೀಕರಣ ಕೊಡಬೇಕಾದುದು ನನ್ನ ಕರ್ತವ್ಯವಾಗಿರುವುದರಿಂದ, ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಆದ್ದರಿಂದಾಗಿ, ಅಲ್ಲಿ ಹೋಗಿ ಅವರ ಮನವಿಯನ್ನು ಸ್ವೀಕಾರ ಮಾಡಿಕೊಂಡು ಇಲ್ಲಿಗೆ ಬಂದಿದ್ದೇನೆ. ದಯವಿಟ್ಟು ಅಷ್ಟರಮಟ್ಟಿಗೆ ನನಗೆ ಕ್ಷಮೆ ಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಈಗ ಚರ್ಚೆ ಆರಂಭ ಮಾಡೋಣ. ಮಾನ್ಯ ಸಿ.ಟಿ.ರವಿಯವರು ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನನಗೆ ...

(ಈ) ದಿ ಲಿಮಿಟೇಶನ್ ಕಮಿಟಿ ಕಾನ್ಸ್ಟಿಟ್ಯುಟ್ ಆಗಿದ್ದು ಪ್ರಾತಿನಿಧ್ಯ ನೀಡುವಲ್ಲಿ ತಾರತಮ್ಯ ಆಗಿರುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) : ಮಾನ್ಯ ರವಿಯವರೆ, ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, ಆ Delimitation committee constitute ಆಗಿದೆ. ಅದರಲ್ಲಿ ಬಹುಶಃ proportional representation ಇಲ್ಲ, atleast ಕೇಳಿ ತಾವಾದರೂ ಮಾಡಿದ್ದರೆ ಸರಿ ಹೋಗುತ್ತಿತ್ತು. ಇದೇನಾಗಿದೆ ಎಂದರೆ, 9ನೇ ತಾರೀಖು ಡೆಲ್ಲಿಯಲ್ಲಿ ಮೀಟಿಂಗ್ ಇಟ್ಟುಕೊಂಡಿದ್ದಾರೆ. ಅದರಲ್ಲಿ ಬಹಳಷ್ಟು imbalance ಆಗಿ ಬಿಟ್ಟಿದೆ. ವಿಶೇಷವಾಗಿ ಈ ಕಡೆ ಕಾಂಗ್ರೆಸ್ ಪಕ್ಷದವರು 65 ಇದ್ದಾರೆ, ಅದರಲ್ಲಿ ಎರಡು, ಇನ್ನೊಂದು ಪಕ್ಷದಲ್ಲಿ 58 ಇದ್ದರೆ, ಅದರಲ್ಲಿ ನಾಲ್ಕು ಇನ್ನೊಂದು 90 ಇದ್ದರೆ, ಅಲ್ಲಿ ನಾಲ್ಕು, ಇನ್ನು ಬೇರೆ independents ಎಲ್ಲಾ ಸೇರಿ, ಅವರು 20ರ ಮೇಲೆ ಇದ್ದಾರೆ, ಸ್ವಲ್ಪ imbalance ಆಗಿದೆ. ಇದು ಏನಾಗುತ್ತದೆ ಎಂದರೆ, ಅಲ್ಲಿ repersent ಮಾಡಬೇಕಾದರೆ, ಸ್ವಲ್ಪ ಎಲ್ಲಾ party views ಅನ್ನೂ ಕೂಡ effective ಆಗಿ present ಮಾಡುವುದಕ್ಕೆ ಅವಕಾಶ ಮಾಡಿಕೊಡತಕ್ಕಂಥದ್ದು ಬಹಳ ಮುಖ್ಯ Ultimately, Election Committeeಯವರು ಏನು ಮಾಡುತ್ತಾರೋ ಮಾಡಲಿ. ಆದರೆ

representation ಮಾಡುವಾಗಲಾದರೂ ಕೂಡ ಎಲ್ಲರ ಅಬಿಪ್ರಾಯವನ್ನು ವ್ಯಕ್ತಿ ಮಾಡತಕ್ಕಂಥ ಒಂದು proportionately representation ಇದ್ದರೆ effective ಆಗಿ ಆಗುತ್ತದೆ. ಇಲ್ಲದಿದ್ದರೆ, ಸ್ವಲ್ಪ ತಾಪತ್ರಯವಾಗುತ್ತದೆ. ಸ್ವಲ್ಪ ದಯವಿಟ್ಟು ಅದನ್ನು ಸರಿಪಡಿಸಿ, ಇಲ್ಲದಿದ್ದರೆ ಅದು ನಾಳೆ ಅನ್ಯಾಯವಾಗುತ್ತದೆ. ಏಕೆಂದರೆ ಈಗ delimitation constitute ಆಗಿದ್ದು, 10 ವರ್ಷ–20 ವರ್ಷಗಳ ಕಾಲ ಹಾಗೆಯೇ ಮುಂದಕ್ಕೆ ನಡೆದುಕೊಂಡು ಹೋಗುತ್ತದೆ. ಅದಕ್ಕಾಗಿ ಈ ರೀತಿಯಾಗಿ ಸ್ವಲ್ಪ ಅನ್ಯಾಯವಾಗಬಾರದು. ಅದರ ಬಗ್ಗೆ ತಾವು ತಕ್ಷಣ ಬರೆಯಬೇಕು. ಇಲ್ಲವೆಂದರೆ, 9ಕ್ಕೆ ಇರುವ ಮೀಟಿಂಗ್ ಆದರೂ postpone ಮಾಡಿಸಿ, fresh ಹೆಸರುಗಳನ್ನು ತಾವು ಕಳುಹಿಸಿಕೊಡಿ. ಇಲ್ಲದಿದ್ದರೆ, ಅವರೇ ಸರಿಪಡಿಸುತ್ತೇವೆ ಎಂದರೆ, ಅವರಿಗೆ ಬರೆದು, ಸರಿಪಸಿಡಿ ಆಮೇಲೆ ನಮಗೆ ಕರೆಯಿರಿ ಎಂದಾದರೂ ಹೇಳಬೇಕು. ಇದನ್ನು ಸರಿ ಮಾಡದೇ ಹೋದರೆ ನಿಜವಾಗಿಯೂ ಅನ್ಯಾಯವಾಗುತ್ತದೆ ಮತ್ತು effective ಆಗಿ ನಾವು ನಮ್ಮ ಪಾತ್ರವನ್ನು ವಹಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ದಯವಿಟ್ಟು ಅದನ್ನು ತಾವು ಸರಿಪಡಿಸಬೇಕು ಎಂದು ಕೋರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನು ಅಧ್ಯಕ್ಷರೆ...

ಶ್ರೀ ವಾಟಾಳ್ ನಾಗರಾಜ್ : ಒಂದ್ನಿಮಿಷ, ತಾವು ಹೇಳುವುದು correct. ತಾವು ಹೇಳುವುದು ಬಹಳ ಪ್ರಾಮುಖ್ಯವಾದುದು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಕಳೆದ ಒಂದು ವರ್ಷದಲ್ಲಿ, ಇತ್ತೀಚೆಗೆ ಚುನಾವಣೆಯಾದ ಮೇಲೆ, ಎಂದೂ ನಾವು ಸಭೆಯನ್ನೇ ಸೇರಿಲ್ಲ. ಅಂತಹ ಸಂದರ್ಭದಲ್ಲಿ ಇಡೀ ರಾಜ್ಯದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಯಾವ್ಯಾದಕ್ಕೆ ಏನೇನು reservation ಆಯಿತು ಎಂದು ಪಟ್ಟಿ ಪ್ರಕಟವಾಗಿ ಹೋಯಿತು. ಅದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತುಕೊಂಡು, ಅದೇನೂ ಸರಿಯಿಲ್ಲ, ಇನ್ನೂ ಆ delimitation ಸಮಿತಿ ಸಭೆಯೇ ಸೇರಿಲ್ಲ ಎಂದರು. ಹಾಗಾದರೆ ಅನಧಿಕೃತವಾದಂತಹ ಆ ಪಟ್ಟಿಗಳು ಬಂದದ್ದು ಹೇಗೆ? ಅವುಗಳಿಗೆ ಪತ್ರಿಕೆಗಳಲ್ಲಿ ಆದ್ಯತೆ ಸಿಕ್ಕಿ, ಅವು ಪ್ರಮುಖವಾಗಿ ಮುಖಪುಟಗಳಲ್ಲಿ ಬಂದಿದ್ದು ಹೇಗೆ ? 9ನೇ ತಾರೀಖು ಮೀಟಿಂಗ್ ಇದೆ ಎಂದರೆ, ಅದರಲ್ಲಿ ಯಾಗಿದ್ದಾರೆ ? ಯಾರಿಲ್ಲ ? ಅದು ನಿಮಗೆ ಗೊತ್ತಿದೆ. ನಾವೇನೂ ಮಾಡುವುದಕ್ಕೆ ಬರುವುದಿಲ್ಲ ಅದು ನಿಮಗೆ ಗೊತ್ತಿರುತ್ತದೆ. ಆದ್ದರಿಂದ ಮಾನ್ಯ ಖರ್ಗೆಯವರು ಹೇಳಿದಂತೆ, ಈ ಸಂಖ್ಯೆಯ ಆಧಾರದ ಮೇಳೆ ಪ್ರಾತಿನಿಧ್ಯ ಇದ್ದು ಚರ್ಚೆ ಮಾಡಿ, ಸರಿಯಾದಂತಹ ಕ್ಷೇತ್ರ ಮರು ವಿಂಗಡಣೆ ಆಗದಿದ್ದರೆ, ಮುಂದಿನ ಪೀಳಿಗೆ ನಮಗೆ ಶಾಪ ಹಾಕುತ್ತಾರೆ ಸಾರ್. ಇಷ್ಟು ವರ್ಷಗಳ ಕಾಲ ಹೇಗ್ತೇಗೋ ಆಗಿ ಹೋಯಿತು. ಈಗ ಅದನ್ನು ಮಾಡುವುದಕ್ಕೆ ಪರಿಸ್ಥಿತಿಗಳು ಏನೇನಿದೆ? ಅದಕ್ಕೆ ಕಮಿಟಿ ಯಾವುದು ಮಾಡಿದ್ದೀರಿ? ನೀವು ಯಾವ recommendition ಮಾಡಿದ್ದೀರಿ? 9ನೇ ತಾರೀಖು ಮೀಟಿಂಗ್ ಇದೆಯೇ ಇಲ್ಲವೋ ? ಪ್ರತಿಪಕ್ಷದ ನಾಯಕನಾಗಿ ನಾವಂತೂ ಗೊಂದಲದಲ್ಲಿದ್ದೇವೆ ಸಾರ್. ಅದಕ್ಕೋಸ್ಕರ ನೀವು ಯಾರ ಹೆಸರುಗಳನ್ನು ಕಳುಹಿಸಿದ್ದೀರಿ, ಅದೇನಾಗಿದೆ, ಪಟ್ಟಿ ಹೇಗೆ ಪ್ರಕಟವಾಯಿತು, ಪತ್ರಿಕೆಯಲ್ಲಿ ಪಟ್ಟಿ ಹೇಗೆ ಪ್ರಕಟವಾಯಿತು, ಅದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಹೇಳಬೇಕು ಇದರಿಂದ ಪತ್ರಿಕೆಗಳ

ಮೂಲಕ ಸತ್ಯಸಂಗತಿ ಈಚೆಗೆ ಬರುತ್ತದೆ. ಏಕೆಂದರೆ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು ಅದಕ್ಕೇನೂ ಬುಡ ಇಲ್ಲ, ಮೇಲಿಲ್ಲ ಎಂದು. ಹಾಗಾದರೆ ಬಂದದ್ದು ಹೇಗೆ? ಎಲ್ಲಿ ನಡೆಯಿತು ಈ ಮೀಟಿಂಗ್? ಹಾಗಾದರೆ ಪೂರ್ವಭಾವಿ ಎಲ್ಲಾ ಸಿದ್ಧತೆಯನ್ನು ಮಾಡಿಬಿಟ್ಟು ನಮಗೆ ನಾಮಕಾವಸ್ಥೆಗೋಸ್ಕರ ಈ ಡೀ–ಲಿಮಿಟೇಶನ್ ಮೀಟಿಂಗ್‌ಗೆ ಎಂದು ಕರೆಯುತ್ತಿದ್ದಾರೆಯೇ? ಇದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಬೇಕಲ್ಲಾ ಸಾರ್. ತಮಗೆ ಗೊತ್ತಿದ್ದರೆ ದಯಮಾಡಿ ಹೇಳಿ ಸಾರ್.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಕ್ಷೇತ್ರ ವಿಂಗಡಣೆಯಲ್ಲಿ ಸಂಪೂರ್ಣವಾಗಿ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ. ಅದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮಲ್ಲಿ ಯಾವ ರೀತಿ ಸಭೆ ನಡೆದಿದೆ ಎಂಬುದು ಇದುವರೆಗೆ ಗೊತ್ತೇ ಇಲ್ಲ. ನಮ್ಮಲ್ಲಿ ಕರ್ನಾಟಕದವರು ಯಾರು ಯಾರು ಸದಸ್ಯರಿದ್ದಾರೆ ಎಂಬ ಬಗ್ಗೆ ಪತ್ರಿಕೆಗಳಲ್ಲಿ ಬಂತೇ ಹೊರತು ಸಭೆಗಳು ಎಂದು ಸೇರಿತ್ತು ಮತ್ತೆ ನಮ್ಮನ್ನು ಯಾರನ್ನೂ ಕೇಳಲೇ ಇಲ್ಲ, ಮತ್ತು ಸಲಹೆಗಳನ್ನು ಕೇಳಲಿಲ್ಲ ಮತದಾರರ ಸಲಹೆಯನ್ನು ಕೇಳಲಿಲ್ಲ, ಕ್ಷೇತ್ರದ ಸಲಹೆಯನ್ನು ಕೇಳಲಿಲ್ಲ. ಸದನದ ಸಲಹೆಯನ್ನು ಕೇಳಲಿಲ್ಲ, ಈ ಪರಿಸ್ಥಿತಿ ನಿರ್ಮಾಣವಾಗಿದೆ. ಅದರ ಅಧ್ಯಕ್ಷರು 9ನೇ ತಾರೀಖು ದೆಹಲಿಯಲ್ಲಿ ಸಭೆಯನ್ನು ಕರೆದಿದ್ದಾರೆ. ನನಗನ್ನಿಸುತ್ತದೆ, ಈ ಬಗ್ಗೆ ಸಮಗ್ರವಾಗಿ ಅವೊತ್ತು ಮುಖ್ಯಮಂತ್ರಿಗಳಿಗೂ ನಾವು ಒತ್ತಾಯ ಮಾಡಿದೆವು. ಶ್ರೀಮಾನ್ ಎಂ.ಪಿ. ಪ್ರಕಾಶ್‌ರವರು ಒಂದು ಅತ್ಯಂತ ಅಮೂಲ್ಯವಾದಂಥ ವಿಚಾರವನ್ನು ಹೊರಗಡೆವಿದರು. ಈ ಸದನ ನೆಡೆಯದೇ ಇದ್ದಾಗ ಇಲ್ಲಿ ರಾಷ್ಟ್ರಪತಿ ಅಳ್ವಿಕೆ ಇದ್ದಾಗ ಅವರು ಇದನ್ನು ಮಾಡಿ ಕೊಡುವುದು ಈ ಸದನದಿಂದ ಐದು ಜನ ಚುನಾಯಿತರು ಅಲ್ಲಿಗೆ ಹೊಗಬೇಕಾಗಿತ್ತು ಸಮಿತಿಗೆ ಎಂದು ಕೇಳಿ. ಆ ಐದು ಜನ ಹೋಗಲಿಲ್ಲ. ಅದರಬಗ್ಗೆ ಈ ಸದನದಲ್ಲಿ ಚರ್ಚೆಯಾಗಲಿಲ್ಲ. ಈ ಪರಿಸ್ಥಿತಿ ಇರುವಾಗ ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ, ಕೆಲವು ಕಡೆ ಮೀಸಲು ಸ್ಥಾನ, ಕೆಲವನ್ನು ಕಿತ್ತುಹಾಕಿದ್ದಾರೆ, ಕೆಲವು ಲೋಕಸಭಾ ಸದಸ್ಯರ ಲೋಕಸಭಾ ಕ್ಷೇತ್ರಗಳ ಬದಲಾವಣೆ, ಈ ರೀತಿಯ ಗೊಂದಲಮಯವಾದಂಥ ಹೇಳಿಕೆಗಳು ಪತ್ರಿಕೆಗಳಲ್ಲಿ ಬರುತ್ತಿವೆ. ಮತ್ತು ಇಲ್ಲಿ ನಮ್ಮ ರಾಜ್ಯದ ಚುನಾವಣಾ ಆಯೋಗದವರು ಹೇಳುತ್ತಾರೆ ಪತ್ರಿಕೆಗಳಲ್ಲಿ ಬರುವುದಕ್ಕೂ ಮತ್ತು ನಮಗೂ ಸಂಬಂಧವಿಲ್ಲವೆಂದು ಎನೋ ಇದು ನನಗೊಂದೂ ಅರ್ಥವಾಗುತ್ತಿಲ್ಲ. ಇದು ನಿಜವಾಗಿಯೂ ಕರ್ನಾಟಕದಲ್ಲಿ ಬಹಳವಾಗಿ ಕ್ಷೇತ್ರ ವಿಂಗಡಣೆಯಲ್ಲಿ ದೊಡ್ಡ ಅಪಾಯ ಒದಗಿದೆ. ಒಂದು ರೀತಿ ಅದರ ಲೆಕ್ಕ ನೋಡಿದರೆ ಈ ಪತ್ರಿಕೆಗಳಲ್ಲಿ ಬಂದಿರುವುದೇ ನಿಜವಾಗಿದ್ದರೆ ತೀವ್ರ ಅನ್ಯಾಯವಾಗುತ್ತದೆ. ಬಹಳ ಅನ್ಯಾಯವಾಗುತ್ತದೆ. ಇದರಲ್ಲಿ ತಾವೂ ಒಬ್ಬರು ಸದಸ್ಯರು ಎಂದೆನಿಸುತ್ತದೆ. ಎಲ್ಲೋ ನೋಡಿದ ಹಾಗಿದೆ ಪತ್ರಿಕೆಗಳಲ್ಲಿ. ನಮಗೇನೂ ಗೊತ್ತಿಲ್ಲ. ತಾವೂ ಕರೆದಿಲ್ಲ, ಅಥವಾ ಬೇರೆ ಯಾರೂ ಸದಸ್ಯರುಗಳಾದರೂ ನಮನ್ನು ಕರೆದು ನಿಮ್ಮ ಕ್ಷೇತ್ರದ ಪರಿಸ್ಥಿತಿ ಏನು, ಈ ರೀತಿ ಕ್ಷೇತ್ರ ವಿಂಗಡಣೆ ಬಗ್ಗೆ ನಮ್ಮ ಸಲಹೆಯನ್ನು ಯಾರೂ ಕೇಳಿಲ್ಲ. ಇಡೀ ಕರ್ನಾಟಕದ ಮತದಾರರನ್ನು, ಈ ಸಭೆಯನ್ನು ಸಂಪೂರ್ಣವಾಗಿ ಕತ್ತಲೆಯಲ್ಲಿಟ್ಟಿದ್ದಾರೆ. ದಯಮಾಡಿ ತಾವು, 9ನೆಯ ತಾರೀಖಿನ ಸಭೆಯನ್ನು ಮಂದಕ್ಕೆ ಹಾಕಿಸಿ ಸಮಗ್ರವಾಗಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಪ್ರತಿಯೊಂದು ಸಂಪೂರ್ಣವಾಗಿ ಚರ್ಚೆ ಆಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ. ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅವರು ಏನು ಹೇಳಿದ್ದಾರೆ, ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಕೇಳಬೇಕು ಅವರು ಮಾಡುತ್ತಾರೋ ಬಿಡುತ್ತಾರೋ ಅದು ಕಮಿಶನರ್‌ಗೆ ಬಿಟ್ಟಂಥದ್ದು ಅದು ಅಂತಿಮವಾದುದು ಎಂದು ಆದರೆ ಕರ್ನಾಟಕದಿಂದ ಯಾರು ಯಾರು ಸದಸ್ಯರು ಎಂಬುದು ನಮಗೆ ಗೊತ್ತಿಲ್ಲ. ಕನಿಷ್ಠ ನಾವು ಅವರ ಹತ್ತಿರ ಹೋಗಿ ಕ್ಷೇತ್ರಗಳ ಪರಿಸ್ಥಿತಿ ಹೀಗಿದೆ, ತಾಲ್ಲೂಕಿನ ಪರಿಸ್ಥಿತಿ ಹೀಗಿದೆ, ಇವುಗಳನ್ನೆಲ್ಲಾ ಹೇಳಿಕೊಳ್ಳುವುದಕ್ಕೂ ಕೂಡ ನಮಗೆ ಕನಿಷ್ಟ ಅವಕಾಶವನ್ನೇ ಕೊಟ್ಟಿಲ್ಲ ಎಂದು ಹೇಳಬೇಕು. ಎಲ್ಲರನ್ನೂ ಸದಸ್ಯರನ್ನಾಗಿ ಮಾಡಿ ಎಂದು ನಾವೇನೂ ಕೇಳುವುದಿಲ್ಲ. ಮಾನ್ಯ ಖರ್ಗೆಯವರು ಬಹಳ ಕರೆಕ್ಟ್ ಆಗಿ ಹೇಳಿದ್ದಾರೆ. ಎಲ್ಲಾ ಪಕ್ಷಗಳ ಅಭಿಪ್ರಾಯವನ್ನಾದರೂ ಪಡೆಯಬೇಕು ಎಂದು ಅವರು ಹೇಳತಕ್ಕಂಥದ್ದು ಸರಿ ಇದೆ. ಕನಿಷ್ಠ ನಮ್ಮ ಹತ್ತಿರ ಅಭಿಪ್ರಾಯವನ್ನಾದರೂ ನೀವು ಬರೆದು ಕೊಳ್ಳಿ ಇಂತಿಂಥ ಪರಿಸ್ಥಿತಿ ಇದೆ ಎಂದು ಹೇಳಿ ನಮ್ಮನ್ನು ಕೇಳಿಲ್ಲ. ಹೀಗಾಗಿ ಇವೊತ್ತು ಏನಾಗುತ್ತಿದೆಯೆಂದರೆ ಅವರು ಯಾವ ಮಾನದಂಡವನ್ನು ಅನುಸರಿಸುತ್ತಿದ್ದಾರೆ ಈ ಕ್ಷೇತ್ರ ವಿಂಗಡಣೆಗೆ, ಜನಸಂಖ್ಯೆಯನ್ನೇ ಅಥವಾ ಜಿಯಾಗ್ರಫಿಯನ್ನೇ ಜನಸಂಖ್ಯೆಯನ್ನೇ ಅನುಸರಿಸುವುದಾದರೆ ದಕ್ಷಿಣ ಕನ್ನಡ ಜಿಲ್ಲೆ, ಕೋಸ್ಟ್‌ಲ್ ಬಿಲ್ಟ್‌ನವರಿಗೆ ಅಗತಕ್ಕಂಥ ಅನ್ಯಾಯ ಇಡೀ ಕರ್ನಾಟಕ ರಾಜ್ಯದ ಬೇರೆ ಯಾರಿಗೂ ಅಗುವುದಿಲ್ಲ. ಇಡೀ ದಕ್ಷಿಣ ಕನ್ನಡಕ್ಕೇ ಮೂರು ಸ್ಥಾನ ಸಿಗುತ್ತದಷ್ಟೆ. ಕೊಡಗು ಜಿಲ್ಲೆಯವರಿಗೂ ಅಷ್ಟೆ. ಅವರೇನಾದರೂ ಜನಸಂಖ್ಯೆಯನ್ನೇ ಮಾನದಂಡವನ್ನಾಗಿ ಅನುಸರಿಸಿದಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಕೋಸ್ಟ್‌ಲ್‌ಪರಿಯಾ, ಉಡುಪಿ, ಕೊಡಗು, ಇವೆಲ್ಲಾ ಸೇರಿದರೂ ಹತ್ತು ಜನ ಶಾಸದರೂ ಕೂಡ ಬರುವುದಕ್ಕೆ ಸಾಧ್ಯವಿಲ್ಲ. ಜನಸಂಖ್ಯೆಯೇ ಆಧಾರವೇ ಅಥವಾ ಜಿಯಾಗ್ರಫಿಯೇ? ಯಾವ ಆಧಾರದ ಮೇಲೆ ? ಅಥವಾ ತಾಲ್ಲೂಕು ಕೇಂದ್ರಗಳನ್ನು ಮಾತ್ರ ಕ್ಷೇತ್ರ ಎಂದು ಮಾಡುತ್ತಾರೆಯೇ? ಹೇಗೆ ಎನ್ನತಕ್ಕಂಥದ್ದರ ಬಗ್ಗೆ ಯಾವುದೇ ಮಾನದಂಡ ಇವೊತ್ತು ಇಲ್ಲ. ಇದರಿಂದ ಏನಾಗುತ್ತದೆಂದರೆ ಸಂಪೂರ್ಣವಾಗಿ ಪ್ರಜಾಪ್ರಭುತ್ವದಲ್ಲಿ ಜನರಿಗೆ ಇರತಕ್ಕಂತ ಸಾರ್ವಭೌವತ್ವದ ಅಧಿಕಾರಕ್ಕೆ ಧಕ್ಕೆ ಆಗತಕ್ಕಂಥ ಸ್ಥಿತಿ ಬರುತ್ತದೆ. ಕ್ಷೇತ್ರ ಯಾವುದೋ ಇರುತ್ತದೆ, ತಾಲ್ಲೂಕು ಯಾವುದೋ ಇರುತ್ತದೆ. ಎಪ್ಪತ್ತಾರು ಪೊಲೀಸ್ ಸ್ಟೇಷನ್‌ಗಳು, ಎಪ್ಪತ್ತಾರು ತಾಲ್ಲೂಕು ಆಫೀಸ್‌ಗಳಿರುವ ಜನಕ್ಕೆ ಇಷ್ಟೊಂದು ಸಮಸ್ಯೆಗಳಾಗುತ್ತವೆ ಎಂಬ ಬಗ್ಗೆ ನಾವು ಕೂಡ ವೈಯಕ್ತಿಕವಾಗಿ ಕಷ್ಟವನ್ನು ಅನುಭವಿಸಿದ್ದೇವೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ನೀವು ಅದರಲ್ಲಿ ಸದಸ್ಯರಿದ್ದೀರಿ. ಮಾನ್ಯ ಖರ್ಗೆಯವರು ಹೇಳಿದ ವಿಚಾರವನ್ನು ದಯವಿಟ್ಟು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ನೀವು ಬರೆಯಬೇಕು, ಎಲ್ಲಾ ಪಕ್ಷದ ಅಭಿಪ್ರಾಯವನ್ನು ಪಡೆಯಬೇಕಾದರೆ ನೀವು ಅವರನ್ನೆಲ್ಲಾ ಸದಸ್ಯರನ್ನಾಗಿ ಸೇರಿಸಿಕೊಳ್ಳಿ, ಅಥವಾ ಬೇರೆ ಏನನ್ನಾದರೂ ಮಾರ್ಗವನ್ನು ಅದಕ್ಕೆ ಹುಡುಕಿ ಎಂದು ಇಲ್ಲದಿದ್ದರೆ ಭಾರಿ ತೊಂದರೆಯಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಮೊನ್ನೆ ಕೂಡ ಚರ್ಚೆ ಆಗಿದೆ. ದಯವಿಟ್ಟು ಈ ಕಮಿಟಿ ಬಗ್ಗೆ ಖರ್ಗೆಯವರು ಏನು ಹೇಳಿದ್ದಾರೆ ಅದಕ್ಕೆ ನಮ್ಮ ಸಹಮತ ಇದೆ. ಇಲ್ಲಿ ಇರುವಂಥ ದಾಮಾಷಾ ಪ್ರಕಾರ ರೆಪ್ರೆಸೆಂಟೇಷನ್ ಇರಬೇಕು ಎನ್ನುವಂಥದ್ದರಲ್ಲಿ

ಭಿನ್ನಾಭಿಪ್ರಾಯವಿಲ್ಲ. ವಿಶೇಷವಾಗಿ ಮೊನ್ನೆ ಕೂಡ ಪ್ರಸ್ತಾಪವಾಗಿದೆ. ಗ್ರಾಮೀಣ ಪ್ರದೇಶದ ರೆಪ್ರೆಸೆಂಟೇಷನ್ ಕಡಿಮೆಯಾಗುತ್ತದೆ. ಪಟ್ಟಣದ ರೆಪ್ರೆಸೆಂಟೇಷನ್ ಜಾಸ್ತಿಯಾಗುತ್ತದೆ. ಹೀಗಾಗಿ ಗ್ರಾಮೀಣ ಕರ್ನಾಟಕ ನೆಗ್ಲೆಕ್ಟ್ ಆಗುತ್ತದೇನೋ ಎನ್ನುವಂಥಾದ್ದು ಕೂಡ ನಮ್ಮ ಆತಂಕ ಇದೆ. ಅದರ ಜೊತೆಗೆ ಮುಖ್ಯವಾಗಿ ನಮ್ಮ ಮಲೆನಾಡು ಪ್ರದೇಶಕ್ಕೆ ತುಂಬಾ ದೊಡ್ಡ ಹೊಡೆತ ಬೀಳುತ್ತದೆ. ಏನು ಈಶಾನ್ಯ ಪ್ರದೇಶಕ್ಕೆ ಗುಡ್ಡಗಾಡು ಪ್ರದೇಶಕ್ಕೆ ರೆಪ್ರೆಸೆಂಟೇಷನ್ ಇದೆ ಆ ರೀತಿಯ ಒಂದು ಮಾನದಂಡವನ್ನು ಅನುಸರಿಸಿ ಎಂದು ನಾವು ಒಂದು ನಿರ್ಣಯವನ್ನು ಮಾಡಿ ಕಳುಹಿಸದೇ ಹೋದರೆ ನಮ್ಮ ಮಲೆನಾಡಿನ ಅಷ್ಟು ಜಿಲ್ಲೆಗಳಿಗೆ ಇದರಿಂದಾಗಿ ಹೊಡೆತ ಬೀಳುತ್ತದೆ. ಏಕೆಂದರೆ ವಿಸ್ತೀರ್ಣದಲ್ಲಿ ನಾವು ತುಂಬಾ ದೊಡ್ಡದಿದ್ದೇವಿ ಮತ್ತೆ ನಾಗರೀಕ ಸೌಲಭ್ಯಗಳನ್ನು ಅಲ್ಲಿ ಕೊಡಬೇಕಾಗುತ್ತದೆ. ಹಾಗೆಯೇ ಜನಸಂಖ್ಯೆ ಕಡಿಮೆ ಇದೆ. ಈ ಕಾರಣಕ್ಕಾಗಿ ನಮ್ಮ ಸಂಖ್ಯೆ ಕಡಿಮೆ ಆಗುತ್ತದೆ ಮತ್ತು ಅಲ್ಲಿ ಅಭಿವೃದ್ಧಿ ಕೆಲಸಗಳು ಹಾಳಾಗಿ ಹೋಗುತ್ತವೆ. ಈ ದೃಷ್ಟಿಯಿಂದ ನಮಗೆ ಅನ್ಯಾಯವಾಗುತ್ತದೆ. ಇದು ಯಾವುದೂ ವಿಸ್ತಾರವಾದಂಥ ದೃಷ್ಟಿಕೋನ ಇಲ್ಲದೆಯೇ ಮಾಡುವುದಕ್ಕೆ ಹೊರಟರೆ ನಮಗೆ ಅನ್ಯಾಯವಾಗುತ್ತದೆ. ಈ ಹಂತದಲ್ಲಿ ಶಾಸನಸಭೆಯೊಳಗೆ ನಾವು ಏನು ಮಾಡಬೇಕೆಂದು ಚಿಂತಿಸಿ ಸರ್ಕಾರದ ಕಡೆಯಿಂದ ಒಂದು ನಿರ್ಣಯವನ್ನು ತಂದು ಕೇಂದ್ರ ಸರ್ಕಾರಕ್ಕೂ ಕಳುಹಿಸಿ ಲೋಕಸಭೆಯಲ್ಲಿ ಇದು ಚರ್ಚೆಯಾಗುವ ಹಾಗೆ ಮಾಡಿ ಅದಕ್ಕೆ ಪುನರಪಿ ಏನಾದರೂ ಮಾಡುವುದಕ್ಕೆ ಆಗುತ್ತದೆಯೇ, ಅದನ್ನು ತಡೆ ಹಿಡಿಯುವುದಕ್ಕೆ ಆಗುತ್ತದೆಯೇ ಎಂದು ನೋಡಬೇಕು. ಇಲ್ಲದೇ ಇದ್ದರೆ ಯಾವುದೇ ಒಂದು ಹೆಜ್ಜೆ ಮುಂದಿಟ್ಟಿರುವುದರ ಮೇಲೆ ನಾಳೆ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎನ್ನುವ ಪ್ರಶ್ನೆ ಬೇರೆ. ಆದರೆ ಮುಂದೆ ಎಲ್ಲರಿಗೂ ಕೂಡ ಚುನಾವಣೆಯ ದೃಷ್ಟಿಯಿಂದ ತುಂಬಾ ತೊಂದರೆಯಾಗುತ್ತದೆ ರೆಪ್ರೆಸೆಂಟೇಷನ್ ದೃಷ್ಟಿಯಿಂದ.

ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ) : ಮಾನ್ಯ ಅಧ್ಯಕ್ಷರೆ, ಕಾನ್‌ಸ್ಟಿಟ್ಯೂಯೆನ್ಸಿಗಳನ್ನು ರೀ–ಆರ್ಗನೈಸ್ ಮಾಡುವಾಗ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಹೊಸ ಜಿಲ್ಲೆಗಳನ್ನು ರಚನೆ ಮಾಡಿದ್ದೇವೆ. ಅದೇ ರೀತಿಯಾಗಿ 36 ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಅದಕ್ಕಾಗಿ ವಿಶೇಷ ತಹಶೀಲ್ದಾರರುಗಳನ್ನೂ ಕೂಡ ನಾವು ನೇಮಕಾರಿ ಮಾಡಿದ್ದೇವೆ. ಹೊಸ ತಾಲ್ಲೂಕುಗಳನ್ನು ರಚನೆ ಮಾಡುವಾಗ ಕೂಡ ಕಾನ್‌ಸ್ಟಿಟ್ಯೂಎನ್ಸಿಗಳನ್ನು ರೀ–ಆರ್ಗನೈಸ್ ಮಾಡುವಾಗ ಅದನ್ನು ಗಮನದಲ್ಲಿಟ್ಟುಕೊಂಡು ಮಾಡಿದರೆ ಹೊಸ ತಾಲ್ಲೂಕುಗಳಿಂದ ನಮಗೆಲ್ಲಾ ಅನುಕೂಲವಾಗುತ್ತದೆ. ಅದಕ್ಕೇ ನಾವು ಹುಂಡೇಕಾರ್, ವಾಸುದೇವರಾವ್, ಗದ್ದಿಗೌಡರ ಸಮಿತಿಯನ್ನು ಆಧಾರವಾಗಿಟ್ಟುಕೊಂಡು ಹೊಸ ತಾಲ್ಲೂಕುಗಳನ್ನು ಏನು ರಚನೆ ಮಾಡುತ್ತಿದ್ದೇವೆ ಈಗಾಗಲೇ 36 ಹೊಸ ತಾಲ್ಲೂಕುಗಳ ರಚನೆಗೆ ಕ್ರಮ ತೆಗೆದುಕೊಂಡು ವಿಶೇಷ ತಹಶೀಲ್ದಾರ್‌ರುಗಳನ್ನು ನೇಮಕಾತಿ ಮಾಡಿದ್ದೇವೆ. ಅದನ್ನೂ ಕೂಡ ತಾವು ಸಮಿತಿಯವರು ಗಮನದಲ್ಲಿ ತೆಗೆದುಕೊಂಡು ಅವರ ಮನವೊಲಿಸಿ, ಅವುಗಳನ್ನು ಕೂಡ ಕಾನ್‌ಸ್ಟಿಟ್ಯೂಯೆನ್ಸಿ ರೀ–ಆರ್ಗನೈಸ್ ಮಾಡುವಾಗ ಆ ಹೆಡ್ ಕ್ವಾರ್ಟರ್‌ಗಳನ್ನು ಕೂಡ ತಾವು ಗಮನದಲ್ಲಿಟ್ಟುಕೊಳ್ಳುವಂಥ ಅವಶ್ಯಕತೆ ಇದೆಯೆಂದು ಹೇಳುತ್ತೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಈಗ ನಾವು ಸುತ್ತು ಹಾಕಬೇಕೆಂದು ಈಗಿರುವಂಥ ವ್ಯಾಪ್ತಿಯಲ್ಲಿಯೇ ಒಂದು ತಿಂಗಳು ಬೇಕಾಗುತ್ತದೆ. ಈಶಾನ್ಯ ರಾಜ್ಯಗಳಲ್ಲಿ ಜನಸಂಖ್ಯೆಯನ್ನೇ ಆಧಾರವನ್ನಾಗಿ ಪರಿಗಣಿಸಿಲ್ಲ. ಅಲ್ಲಿ 50 ಸಾವಿರಕ್ಕೆ 60 ಸಾವಿರಕ್ಕೆ ಒಂದು ಕ್ಷೇತ್ರವನ್ನು ಮಾಡಿದ್ದಾರೆ. 10 ಸಾವಿರಕ್ಕೂ ಕ್ಷೇತ್ರಗಳಿವೆ. ಮಲೆನಾಡನ್ನು ಮತ್ತು ಕರಾವಳಿಯನ್ನು ಈ ಏರಿಯಾ ದೃಷ್ಟಿಯಿಂದಲೂ ಕೂಡ ನಾವು ನೋಡಬೇಕಾಗುತ್ತದೆ. ಬರೇ ಜನಸಂಖ್ಯೆಯಷ್ಟನ್ನೇ ತೆಗೆದುಕೊಳ್ಳಬಾರದು. ಇದರ ಜೊತೆ ಜೊತೆಯಲ್ಲಿಯೇ ಈಗ ಬಂದಿರತಕ್ಕಂಥ ಗೈಡ್‌ಲೈನ್‌ನಲ್ಲಿ ಗ್ರಾಮ ಪಂಚಾಯತಿಯನ್ನೂ ಕೂಡ ಒಂದು ಯೂನಿಟ್ ಎಂದು ಪರಿಗಣಿಸುತ್ತೇವೆ ಎಂದು ಹೇಳಿದ್ದಾರೆ. ಆ ಗ್ರಾಮಪಂಚಾಯತಿಯನ್ನು ಒಂದು ಯೂನಿಟ್ ಎಂದು ಪರಿಗಣಿಸುವುದರಿಂದ ಅಗತಕ್ಕಂಥ ಆಡಳಿತಾತ್ಮಕ ತೊಂದರೆಗಳು ಏನು ಎಂಬುದನ್ನೂ ಕೂಡ ಚುನಾವಣಾ ಆಯೋಗದ ಗಮನಕ್ಕೆ ತರಬೇಕಾಗುತ್ತದೆ. ಆ ಗ್ರಾಮ ಪಂಚಾಯತಿಯೇ ಒಂದು ಆ ಕಡೆ ಹೋಗುತ್ತದೆ. ಒಂದುಈ ಕಡೆ ಹೋಗುತ್ತದೆ, ತಾಲ್ಲೂಕಿನಲ್ಲಿಯೇ ಬೈಫರ್ಕೇಟ್ ಆಗುತ್ತದೆ. ಆಮೇಲೆ ಉದ್ಭವವಾಗತಕ್ಕಂಥ ಸಮಸ್ಯೆಗಳು ಹಲವಾರು ಇವೆಲ್ಲಾವನ್ನೂ ಗಮನಿಸಿಕೊಂಡು ವಿಚಾರ ಮಾಡಿಕೊಂಡು ಒಟ್ಟು ನಿರ್ಣಯವನ್ನು ಮಾಡಿಕೊಂಡು ಆಮೇಲೆ ಅಲ್ಲಿ ಹೋಗಿ ಪ್ರತಿನಿಧಿಸುವುದು ಒಳ್ಳೆಯದು ಸಾರ್. ನಾವಿಷ್ಟು ಜನ ಗ್ರಾಮೀಣ ಭಾಗದಿಂದ ಆಯ್ಕೆಯಾಗಿರತಕ್ಕಥ ಶಾಸಕರಿದ್ದೇ ಹಳ್ಳಿಗಳಿಗೆ ಇವೊತ್ತು ನ್ಯಾಯ ಕೊಡಿಸುವುದಕ್ಕೆ ಆಗಿದ್ದೇವೆಯೇ ಎನ್ನತಕ್ಕಂಥ ಸ್ಥಿತಿಯಲ್ಲಿ ನಾವಿಲ್ಲ. ಅದಕ್ಕೆ ಪ್ರಾತಿನಿಧ್ಯ ಕೊಡುವಾಗ ವಿಧಾನಸಭೆಯೊಳಗಡೆ ನಾಳೆ ಗ್ರಾಮೀಣ ಭಾಗದ್ದು ಸದಸ್ಯತ್ವ ಕಡಿಮೆಯಾದರೆ ಯಾವ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು ನಗರ ಕೇಂದ್ರೀಕೃತವಾದಂಥ ವ್ಯವಸ್ಥೆಯನ್ನೇ ರೂಪಿಸುವುದರ ಕಡೆಗೆ ಯೋಚನೆ ಮಾಡಿ ಗ್ರಾಮಾಂತರ ಕೇಂದ್ರೀಕೃತವಾಗಲಿಲ್ಲವೆಂದರೆ ಇನ್ನಷ್ಟು ಅನ್ಯಾಯವಾಗುತ್ತದೆ. ಇದನ್ನೆಲ್ಲಾವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಗ್ರಾಮೀಣ ಭಾಗಕ್ಕೆ ಅನ್ಯಾಯವಾಗದ ರೀತಿಯಲ್ಲಿ ಪ್ರಾತಿನಿಧ್ಯ ಇರಬೇಕು. ಜನಸಂಖ್ಯೆಯನ್ನೇ ಆಧಾರವಾಗಿ ತೆಗೆದುಕೊಳ್ಳುತ್ತಾ ಹೋದರೆ ಇಲ್ಲಿ ಒಟ್ಟಿಗಿರತಕ್ಕಂತ ಜನಸಂಖ್ಯೆ, ನಾವು ಅಲ್ಲಿ ದೂರ ದೂರದಲ್ಲಿರತಕ್ಕಂಥ ಹಳ್ಳಿಗಳು. ಇದರಿಂದ ಗ್ರಾಮಾಂತರ ಪ್ರದೇಶಕ್ಕೆ ಇನ್ನಷ್ಟು ಅನ್ಯಾಯವಾಗುತ್ತದೆ. ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಒಂದು ಸರ್ವ ಪಕ್ಷ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಕರೆದು ಅಲ್ಲಿ ಎಲ್ಲವನ್ನೂ ಕ್ರೋಢೀಕರಿಸಿ ಒಂದು ನಿರ್ಣಯವನ್ನು ತೆಗೆದುಕೊಂಡು ಯಾರು ಐದು ಜನ ಪ್ರತಿನಿಧಿಗಳು ಅಲ್ಲಿ ಹೋಗಿ ಭಾಗವಹಿಸುತ್ತಾರೋ ಅವರು ಇಡೀ ಕರ್ನಾಟಕವನ್ನು ಪ್ರತಿನಿಧಿಸತಕ್ಕಂತ ಪ್ರತಿನಿಧಿಗಳಾಗಿ ಭಾಗವಹಿಸಬೇಕೇ ಹೊರತು ಕೇವಲ ಪಕ್ಷದ ವಿಚಾರವನ್ನು ಹೊತ್ತುಕೊಂಡು ಪ್ರತಿನಿಧಿಸತಕ್ಕಂಥವರಾಗಬಾರದು. ಅದಕ್ಕೋಸ್ಕರ ತಾವು ಸಭೆ ಕರೆಯಬೇಕು. ಉದಾಹರಣೆಗೆ ಈಗಾಗಲೇ ನಮ್ಮ ಜೀವರಾಜ್‌ರವರ ಕ್ಷೇತ್ರ ಇದೆ. ಅದು ಮೂರು ತಾಲ್ಲೂಕುಗಳು ಸೇರಿ ಒಂದು ಕ್ಷೇತ್ರ ಈಗಿನ ನಿಯಮಾವಳಿ ಪ್ರಕಾರ ಆ ಮೂರು ಜೊತೆಗೆ ನಾಲ್ಕನೆಯ ತಾಲ್ಲೂಕು ಅವರಿಗೆ ಸೇರುತ್ತದೆ. ಅಂದರೆ ಆಡಳಿತಾತ್ಮಕವಾಗಿ ಯಾವ ದೃಷ್ಟಿಯಿಂದಲೂ ಅದು ವ್ಯವಹಾರಿಕ ಅಲ್ಲವೇ

ಅಲ್ಲ. ಮೂರು ತಾಲ್ಲೂಕುಗಳನ್ನೇ ಅವರಿಗೆ ನಿಭಾಯಿಸುವುದು ಕಷ್ಟ. ಮೂರು ಕೆ.ಡಿ.ಪಿ. ಮೀಟಿಂಗ್‌ಗಳನ್ನೇ ಅವರಿಗೆ ಮಾಡುವುದಕ್ಕಾಗುವುದಿಲ್ಲ. ಅದರ ಜೊತೆಗೆ ನಾಲ್ಕನೆಯ ತಾಲ್ಲೂಕು ಕೂಡ ಬಂದು ಸೇರಿಕೊಂಡರೆ ಅವರ ಪರಿಸ್ಥಿತಿ ದೇವರೇ ಗತಿ ಆಗಿಬಿಡುತ್ತದೆ ಹಾಗೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಆರ್.ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಈಗ ಜ್ಞಾನೇಂದ್ರರವರು ಹೇಳಿದ ಹಾಗೆ ಗ್ರಾಮೀಣ ಪ್ರದೇಶದ ಪ್ರಾತಿನಿಧ್ಯ ಬಹಳಷ್ಟು ಕಡಿಮೆಯಾಗುತ್ತದೆ. ನಾವು ನಗರ ಪ್ರದೇಶದಲ್ಲಿ ಜನಸಂಖ್ಯೆ ಪ್ರಕಾರ ಹೆಚ್ಚು ಮಾಡುವುದಕ್ಕೆ ಬೇಡ ಎಂದು ಹೇಳುವುದಿಲ್ಲ. ಆದರೆ ಅಷ್ಟು ಸೀಟು ನೀವು ಪ್ರಪೋಷನೇಟ್ ಆಗಿ ಇನ್‌ಕ್ರೀಸ್ ಮಾಡಿಸಿಬೇಡಿ. ಆಗ ಪಾಪ್ಯುಲೇಷನ್ ಗ್ರೋತ್ ಕಡಿಮೆ ಆಗಿದ್ದು ಹೆಚ್ಚಾಗಿದ್ದು ಎನ್ನುವ ಪ್ರಶ್ನೇನೇ ಬರುವುದಿಲ್ಲ. ಪ್ರಪೋಷನೇಟ್ ಆಗಿ ಸೀಟ್ ಇನ್‌ಕ್ರೀಸ್ ಆಯಿತು ಎಂದರೆ ಅದೆಷ್ಟು ನಗರ ಪ್ರದೇಶಕ್ಕೆ ಕೊಡಬೇಕು ಅಷ್ಟು ಕೊಡಬಹುದು. ಈಗ state as a whole unit ಇರುವುದಕ್ಕೆ ಇದರ ಬದಲು ಡಿಸ್ಟ್ರಿಕ್ಟ್ ಯೂನಿಟ್ ಮಾಡಿ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಸೀಟಿವೆ, ಅಲ್ಲಿ ಪಾಪ್ಯುಲೇಷನ್ ಈಕ್ವಲ್ ಮಾಡುವ ಹಾಗೆ ರೀ ಅರೇಂಜ್ ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ. ಈಗ ಕ್ರೈಟೀರಿಯಾ ಅದನ್ನೆಲ್ಲಾ ಬದಲು ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ ಅದರ ಮಾಹಿತಿ ನಮಗೆ ಇಲ್ಲ. ದಯವಿಟ್ಟು ಇದರ ಬಗ್ಗೆ ತಾವು ಬೆಳಕು ಚೆಲ್ಲಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದೆ ಕೂಡ ಮಾನ್ಯ ವಾಟಾಳ್ ನಾಗರಾಜ್‌ರವರು ಈ ವಿಷಯವನ್ನು ಸದನದಲ್ಲಿ ಎತ್ತಿದಾಗ, ನಾನು ನನಗೆ ತಿಳಿದ ಕೆಲವು ಮಾಹಿತಿಗಳನ್ನು ಆ ಸಂದರ್ಭದಲ್ಲಿ ಒದಗಿಸಿದ್ದೆ. ಈ ವಿಷಯವ ಗಂಭಿರತೆ ಬಗ್ಗೆ ನಾವೆಲ್ಲರೂ ಕೂಡ ಯೋಚನೆ ಮಾಡಬೇಕಾದಂತಹ ಅವಶ್ಯಕತೆ ಇದೆ. ಅನೇಕ ಮಾನ್ಯ ಸದಸ್ಯರುಗಳು ಎತ್ತಿರತಕ್ಕಂಥ ವಿಷಯಗಳು ಈಗ ನಮ್ಮ ಕೈಯನ್ನು ಮೀರಿ ಹೋಗಿವೆ. ರಾಜ್ಯಸರ್ಕಾರದಲ್ಲೆ ಯಾವ ಅಧಿಕಾರವೂ ಉಳಿದಿಲ್ಲ. ಈಗ ಸಂವಿಧಾನದಲ್ಲಿ ಅವರು ತಿದ್ದುಪಡಿ ಮಾಡತಕ್ಕಂತ ಸಂದರ್ಭದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಂದು ಮಾಡಿ, ಕುಲದೀಪ್‌ಸಿಂಗ್ ರವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ಮಾಡಿದಾಗ 1991ರ ಜನಗಣತಿಯ ಆಧಾರದ ಮೇಲೆ ನಿರ್ಧಾರ ಮಾಡಬೇಕೆಂದು ಮಾಡಿದರು. ಆ ನಿರ್ಧಾರದ ವಿರುದ್ಧವಾಗಿ ಬಹಳ ಜನ ಲೋಕಸಭಾ ಸದಸ್ಯರು ಮನವಿಯನ್ನು ಕೊಟ್ಟ ಕಾರಣಕ್ಕಾಗಿ ಅಂದಿನ ಇಂಡಿಯಾ ಸರ್ಕಾರದವರು ಚುನಾವಣೆಯ ಸಂದರ್ಭದಲ್ಲಿ ಈ ಆಯೋಗ ಯಾವುದೇ ನಿರ್ಣಯ ಮಾಡರಕ್ಕಂಥಾದ್ದು ಅಲ್ಲ. ಅದು ಮುಂದಿನ ಸಂದರ್ಭ ಬಂದಾಗ ಅಂದರೆ 2001 ರ ಜನಗಣತಿಯ ಆಧಾರದ ಮೇಲೆ ತಾವು ನಿರ್ಧಾರ ತೆಗೆದುಕೊಳ್ಳಬಹುದು ಎಂದು ಹೇಳಿ, ಕಳೆದ ಬಾರಿಯ ಚುನಾವಣೆಯನ್ನು ಹಳೇ ಲೆಕ್ಕಾಚಾರದ ಮೇಲೆ ಮಾಡಿದರು. ಇಲ್ಲದೇ ಇದ್ದರೆ ಇದು ಆಗಲೇ ಬಂದು ಹಳೆಯದು ಆಗಿ ಹೋಗುತ್ತಿತ್ತು. ಆದರೆ ಆ ಸಂದರ್ಭದಲ್ಲಿ ಅದನ್ನು ಮುಂದುವರೆಸಿದರು. ಆದರೆ ಆಯೋಗದ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಮಾಡಿರತಕ್ಕಂಥಾದ್ದು ವೈಜ್ಞಾನಿಕ ಅಥವಾ ಅವೈಜ್ಞಾನಿಕ ಎಂದು ಪ್ರಸ್ತಾಪವಾಗಲಿಲ್ಲ. ಆಗ ಅವರ ಕಣ್ಮುಂದೆ ಇರತಕ್ಕಂಥಾದ್ದು ಅನುಸರಿಸಿ ಕೇವಲ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ

2001ರ ಜನಗಣತಿಯ ಆಧಾರದ ಮೇಲೆ ಅವರ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾದಂತಹ ರೀತಿಯಲ್ಲೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಹೇಳಿ ನಿರ್ಣಯವನ್ನು ಮಾಡಿದರು. ಅದಕ್ಕೆ ಅವರು ಕೊಟ್ಟಿರತಕ್ಕಂಥ ಉದಾಹರಣೆ, ಬಿಹಾರ್, ರಾಜಸ್ಥಾನ, ಉತ್ತರ ಪ್ರದೇಶ ಮಧ್ಯಪ್ರದೇಶ ಮೊದಲಾದಂತಹ ರಾಜ್ಯಗಳಲ್ಲಿ, ಈ ಒಂದು ಸಂತಾನ ನಿಯಂತ್ರಣದ ಯೋಜನೆಯನ್ನು ಕರಾರುವಕ್ಕಾಗಿ ಜಾರಿ ಮಾಡಿದೆ, ಅಲ್ಲಿ 3.5 ರಷ್ಟು ಜನಸಂಖ್ಯೆ ಸ್ಫೋಟಗೊಂಡಿದೆ. ಆದ್ದರಿಂದ ಜನಸಂಖ್ಯೆಯ ಆಧಾರದ ಮೇಲೆ ಮಾಡಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾತಿನಿಧ್ಯ ಲೋಕಸಭೆಗೆ ಬರುತ್ತದೆ. ಆಗ ಇಡೀ ಭಾರತ ದೇಶದ ಸರ್ಕಾರ ಎನ್ನುವಂತಾದ್ದು ಕೇವಲ ಮೂರ್ನಾಲ್ಕು ರಾಜ್ಯಗಳಿಗೆ ಸೀಮಿತವಾಗಿರತಕ್ಕಂಥ ಸರ್ಕಾರ ಆಗುತ್ತದೆ ಎನ್ನುವಂತಹ ಯೋಜನೆ ಅಲ್ಲೆ ಚರ್ಚೆಗೆ ಬಂದಮೇಲೆ, ಅವರು ಅದಕ್ಕೆ ಒಂದು ಪರಿಹಾರ ಕಂಡುಕೊಂಡಿದ್ದು ಯಾವುದೆಂದರೆ, ಅರ್ಧ ಪರಿಹಾರ. ಅದರಂತೆ ನಮ್ಮ ರಾಜ್ಯಗಳಲ್ಲಿ ಇರತಕ್ಕಂಥ ಲೋಕಸಭಾ ಸದಸ್ಯತ್ವವಾಗಲಿ, ರಾಜ್ಯ ವಿಧಾನಸಭೆಯ ಸದಸ್ಯತ್ವವಾಗಲಿ ಹೆಚ್ಚಾಗುವ ಹಾಗೆ ಇಲ್ಲ. ನಮ್ಮಲ್ಲಿ 224 ಕ್ಷೇತ್ರಗಳು ಇದ್ದರೆ 224 ಇರಬೇಕು, ಅದರ ಮೇಲೆ ಹೆಚ್ಚಾಗುವ ಹಾಗೆ ಇಲ್ಲ. ಅದು ಎಲ್ಲೆಯವರೆಗೆ ಎಂದರೆ 2025 ರವರೆಗೂ ಕೂಡ ಫ್ರೀಜ್ ಮಾಡಿದ್ದಾರೆ. ಅಲ್ಲಿಯವರೆಗೂ ನಮ್ಮ ಕೆಳಮನೆಯ ಸದಸ್ಯರ ಸಂಖ್ಯೆ ಹೆಚ್ಚಾಗುವುದಿಲ್ಲ. ಜನಸಂಖ್ಯೆ ಎಷ್ಟೇ ಆಗಿರಲಿ. ಆದರೆ ಅದನ್ನು ವೈಜ್ಞಾನಿಕವಾಗಿ ವಿಂಗಡಿಸಬೇಕು, ಇದರ ಪ್ರಕಾರ ಅವರು ಲೆಕ್ಕಾಚಾರ ಹಾಕಿದ್ದು ಠಾಣಿಯಂತಾದ್ದು, ಅಥವಾ ಬೆಂಗಳೂರು ಉತ್ತರ ತಾಲ್ಲೂಕಿನಂತಾದ್ದು ಏನು ಮಾನ್ಯ ಅಶೋಕ್‌ರವರು ಗೆದ್ದು ಬರುತ್ತಾರೆ, ಆ ಕ್ಷೇತ್ರದಲ್ಲಿ 25 ಲಕ್ಷ ಜನಸಂಖ್ಯೆ ಇದ್ದಾರೆ. ಅವರು ಮತ ಕೊಡಬೇಕಾಗುತ್ತದೆ. ಇದು ಅವೈಜ್ಞಾನಿಕವಾಗಿದೆ, ಬೆಂಗಳೂರಿನಲ್ಲಿ 4 ಲಕ್ಷ, 6 ಲಕ್ಷ, 10 ಲಕ್ಷ ಈ ರೀತಿಯಲ್ಲೆ ಒಂದೊಂದು ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಚಿಕ್ಕಪೇಟೆ ಅಂತಹ ಕಡೆ ಕೇವಲ 1,10,000 ಜನಸಂಖ್ಯೆ ಇದೆ. ಅವೈಜ್ಞಾನಿಕವಾದಂತಹ ರೀತಿಯಲ್ಲಿ ಬಡಾವಣೆಗಳು ಬೆಳೆದು ಜನಸಂಖ್ಯೆ ಜಾಸ್ತಿಯಗಿ ಇವೆಲ್ಲಾವನ್ನು ಸರಿಪಡಿಸಬೇಕಾಗಿರುವುದರಿಂದ 2 ಲಕ್ಷ ಜನಸಂಖ್ಯೆಯನ್ನು ಮಿತಿಯಾಗಿಟ್ಟು ಕೊಂಡು ಶೇಕಡ 10ಅನ್ನು ಆಜುಬಾಜಿನಲ್ಲಿ ಇಡಬೇಕೆಂದು ಹೇಳಿ, ಅದು 2,20,000 ಆಗಬಹುದು ಅತವಾ 1,80,000 ಆಗಬಹುದು. ಈ ರೀತಿಯಲ್ಲಿ ಒಂದು ಪಂಚಾಯತಿಯನ್ನು ಒಡೆಯದಂತೆ ವಿಧಾನಸಭೆಯ ಕ್ಷೇತ್ರಗಳ ಮರುವಿಂಗಡಣೆ ಮಾಡುವಾಗ ಜಿಲ್ಲೆಯ ಆಚೆ ಯೋಚನೆ ಮಾಡಲಾರದಂತೆ, ಲೋಕಸಭಾ ಕ್ಷೇತ್ರಗಳನ್ನು ನಿರ್ಧಾರ ಮಾಡುವಾಗ ಜಿಲ್ಲೆಯ ಆಚೆಯೂ ಕೂಡ ತಾವು ಯೋಚನೆ ಮಾಡಬಹುದು ಎನ್ನುವಂತಹ ರೀತಿಯಲ್ಲಿ ಮಾರ್ಗಸೂಚನೆಗಳನ್ನು ಅವರು ಕಳುಹಿಸಿಕೊಟ್ಟಿದ್ದಾರೆ. ಕಳೆದ ಬಾರಿ ಇಂಥಾದ್ದೇ ಒಂದು ಸಲಹಾ ಸಮಿತಿ ಆಗಿತ್ತು. ಈಗ ಹೊಸದಾಗಿ ಸಲಹಾ ಸಮಿತಿಯನ್ನು ಮಾಡಿದ್ದೀರಿ. ಇಲ್ಲಿ ಬಂದಿರುವಂತಹ ಪ್ರಶ್ನೆ ಎಂದರೆ ದೇಶದ ಗೃಹಮಂತ್ರಿಗಳಿಗೆ ಈ ವಿಚಾರದಲ್ಲಿ ಸಂಪೂರ್ಣವಾದಂತಹ ಮನವರಿಕೆ ಇದೆ. ಅವರು ಸಂಪೂರ್ಣವಾದಂತಹ ಭಾಷಣವನ್ನು ಅದು ಲೋಕಸಭೆಯಲ್ಲೇ ಸಂವಿಧಾನದ ತಿದ್ದುಪಡಿಯ ಸಂಧರ್ಭದಲ್ಲಿ ಮಾಡಿರುವುದು ನನ್ನ ಹತ್ತಿರ ಇದೆ. ಅದನ್ನು ನಮ್ಮ ಎಲ್ಲಾ ಸದಸ್ಯರಿಗೆ ತಂದು ಕೊಡಬಹುದು. ಆಗ ಅವರು ಹೇಳುತ್ತಾರೆ, ನಾನು ಕಾಂಗ್ರೆಸ್ ಪಕ್ಷದ ಉಪನಾಯಕನಾಗಿ, ನಾನು ನನ್ನ ಪಕ್ಷದ ಶಿಸ್ತಿನ ಸಿಪಾಯಿಯಂತೆ ಈ ಸಂವಿಧಾನದ ತಿದ್ದುಪಡಿಗೆ ನಮ್ಮ ಪಕ್ಷದ ಪರವಾಗಿ ಅನುಮೋದನೆಯನ್ನು ಕೊಡುತ್ತಿದ್ದೇನೆ. ಆದರೆ ವೈಯುಕ್ತಿಕವಾಗಿ

ನನಗೆ ಕೆಲವು ಆತಂಕಗಳಿವೆ. ಆ ವೈಯುಕ್ತಿಕವಾದಂತಹ ಆತಂಕಗಳು ಏನೆಂದರೆ ಜನಸಂಖ್ಯೆ ಆಧಾರದ ಮೇಲೆ ಮಾಡಿರತಕ್ಕಂಥಾದ್ದಾಗಲಿ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಅನುಪಾತಕ್ಕ ನುಗುಣವಾಗಿ ನೀವು ಹೆಚ್ಚುವರಿ ಮಾಡಿದಾಗ ಕನಿಷ್ಟ ಪಕ್ಷ ಅಲ್ಲಿರತಕ್ಕಂಥ ಕ್ಷೇತ್ರಕ್ಕೆ ಹೆಚ್ಚುವರಿಯಾದರೂ ಕೊಡಬೇಕು, ಇಲ್ಲದೇ ಇದ್ದರೆ ಸಾಮಾನ್ಯ ಕ್ಷೇತ್ರಗಳು ಕಡಿಮೆಯಾಗುತ್ತದೆ. ಇದೂ ಕೂಡ ಸಾಮಾಜಿಕ ನ್ಯಾಯವಾಗುವುದಿಲ್ಲ. ಇಲ್ಲಿ ಸಾಮಾಜಿಕ ನ್ಯಾಯ ಕೊಡಬೇಕು, ಅವರಿಗೆ ಹೆಚ್ಚುವರಿಯಾಗಿ ಇರತಕ್ಕಂಥ ಸ್ಥಾನಗಳನ್ನು ಕಲ್ಪಿಸಿಕೊಳ್ಳುವುದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಸಾಮಾನ್ಯ ಕ್ಷೇತ್ರಗಳನ್ನು ಕಡಿಮೆ ಮಾಡಿ ಅಲ್ಲಿ ಕೊಡತಕ್ಕಂಥಾದ್ದು ಸರಿಯಾದುದಲ್ಲ. ಎನ್ನುವಂತಹ ಮಾತನ್ನು ಕೂಡ ಅವರು ಹೇಳಿದ್ದಾರೆ ಇಲ್ಲಿ ಬಂದಿರತಕ್ಕಂತ ಪ್ರಶ್ನೆ ಹಿಂದೆ ಎನ್‌ಡಿಎ ಸರ್ಕಾರದವರೇ ನನಗೆ ಮಾರ್ಗ ಮಾಡಿಕೊಟ್ಟಿದ್ದಾರೆ. ಅಂದರೆ ಮೊನ್ನೆ ನಡೆಯತಕ್ಕಂತ ಚುನಾವಣೆಯಲ್ಲಿ ನೀವು ಈ ಚುನಾವಣೆಗೆ ನಿಮ್ಮ ಆಯೋಗದಿಂದ ಶಿಫಾರಸ್ಸು ಕೊಡಬೇಕಾದಂತಹ ಅಗತ್ಯವಿಲ್ಲವೆಂದು ಹೇಳಿದರು. ಇವು ಕೂಡ ನಮ್ಮ ಕೇಂದ್ರದಲ್ಲಿ ಇರತಕ್ಕಂಥ ಯುಪಿಎ ಸರ್ಕಾರ ಇದರ ಬಗ್ಗೆ ಮನರ್‌ವಿಮರ್ಶೆ ಮಾಡತಕ್ಕಂಥಾದ್ದೂ ಕೂಡ ಅಗತ್ಯ ಇದೆ. ಈಗ ಸಂವಿಧಾನದ ಪರವಾಗಿ ನಾವು ಬದಲಿ ಮಾಡಿಸಬೇಕಾಗಿದ್ದರೆ, ಅದನ್ನು ನಾವು ನಿಯಮಾವಳಿಗಳ ಪ್ರಕಾರ ಬದಲಿ ಮಾಡಬೇಕಾಗುತ್ತದೆ. ಈಗ ಗಂಭೀರತೆ ಎಷ್ಟಿದೆ ಎಂದರೆ ಮಾನ್ಯ ಹಿರಿಯರಾದಂತಹ ಮಲ್ಲಿಕಾರ್ಜುನ ಖರ್ಗೆಯವರು ವ್ಯಕ್ತ ಮಾಡಿದಂತೆ, ಇಲ್ಲಿ ಸಮಿತಿಯಲ್ಲಿ ಇರತಕ್ಕಂತ ಏರುಪೇರು ಒಂದು ಕಡೆ ಇದ್ದರೆ, ಅದಕ್ಕೆ ಸಂಬಂಧಪಟ್ಟಂತೆ ಡಿಜಿಟಲ್ ಮ್ಯಾಪಿಂಗ್‌ನ್ನು ಈಗಾಗಲೇ ಮಾಡಿಟ್ಟಿದ್ದಾರೆ. 2 ಲಕ್ಷ ಜನಸಂಖ್ಯೆಗೆ ಸಂಬಂಧಪಡುವಂತಹ ರೀತಿಯ ಡಿಜಿಟಲ್ ಮ್ಯಾಪಿಂಗ್ ತಯಾರು ಮಾಡಿರುವಂತಾದ್ದಕ್ಕೆ, ಅದಕ್ಕೆ ನಮ್ಮ ಸದಸ್ಯರನ್ನೆಲ್ಲಾ ಕರೆದು ಅಥವಾ ತಂಡತಂಡವಾಗಿ ಕರೆದು ಅವರಿಗೆ ಮ್ಯಾಪ್‌ಗಳನ್ನು ತೋರಿಸಿ, ಇದರಲ್ಲಿ ಏನಾದರೂ ಸಲಹೆ ಸೂಚನೆಗಳು ಇದೆಯೇಎಂದು ಕೇಳಬೇಕು. ನನಗೆ ಈಗ ಇರತ್ತಕಂಥ ಮಾರ್ಗವೆಂದರೆ ಕೇಂದ್ರ ಸರ್ಕಾರ ಗಮನಹರಿಸಿ ಇದನ್ನು ಬದಲಾವಣೆ ಮಾಡದೇ ಇದ್ದರೆ, ಮೊನ್ನೆ ಜ್ಞಾನೇಂದ್ರ ಅವರು ಹಾಗೂ ಮಾನ್ಯ ಡಿ.ಆರ್.ಪಾಟೀಲ್‌ರವರು ಹೇಳಿದಂತೆ ಇದು ನಗರಗಳಿಗೆ ಸೀಮಿತವಾದಂತಹ ಒಂದು ಪ್ರಾತಿನಿಧಿಕ ಸಭೆಯಾಗುತ್ತದೆಯೇ ವಿನಃ ಗ್ರಾಮಾಂತರ ಪ್ರದೇಶದಲ್ಲಿ ಕೂಡ ಸಭೆ ಆಗುವುದಿಲ್ಲ. ಆ ಲಕ್ಷಣಗಳು ಹೇಗಿವೆ ಎಂದರೆ ನೂರಕ್ಕೆ 70 ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ಇರುತ್ತಾರೆ ಆದರೆ ಸಂಖ್ಯಾಬಲದ ದೃಷ್ಟಿಯಿಂದ ಹೆಚ್ಚಿನ ಸದಸ್ಯರು ಪಟ್ಟಣ ಪ್ರದೇಶಗಳಿಂದ ಬರುತ್ತಾರೆ. ಆದ್ದರಿಂದ ಇದು ಒಂದು ಪ್ರಾತಿನಿಧಿಕವಾಗಿರತಕ್ಕಂಥ ಭಾರತ ದೇಶದ ಸರ್ಕಾರ ಅಥವಾ ಲೋಕಸಭಾ ಆಗುವುದಿಲ್ಲ. ಕರ್ನಾಟಕ ಲೋಕಸಭಾ ಕೂಡ ಆಗುವುದಿಲ್ಲ. ಅದು ಮತ್ತೊಂದರ ಕಡೆ ಆಗುತ್ತದೆ. ಭಾರತ ಎಂದು ನಾನು ಉದ್ದೇಶ ಪೂರ್ವಕವಾಗಿ ಏಕೆ ಹೇಳಿದೆ ಅಂದರೆ, ಈ ದೇಶದಲ್ಲಿ ಇಂಡಿಯಾ ಎನ್ನುವುದು ಬೇರೆಯಿದೆ, ಭಾರತ ಎನ್ನುವುದು ಬೇರೆ ಇದೆ. ಭಾರತ ಗ್ರಾಮೀಣ ಪ್ರದೇಶದ ಭಾರತ. ಇಂಡಿಯಾ ಅನ್ನುವುದು ನಗರ ಪ್ರದೇಶದ ಮೇಲ್ವರ್ಗದ ಅಥವಾ ಇಂಗ್ಲೀಷ್ ಭಾಷೆ.. ಲೋಹಿಯಾರವರು ಒಂದು ಮಾತು ಹೇಳುತ್ತಾರೆ. ಮೇಲ್ಜಾತಿ, ಹಣ, ಇಂಗ್ಲೀಷ್ ಜ್ಞಾನ ಈ ಮೂರರಲ್ಲಿ ಯಾವುದಾದರೂ ಎರಡು ಇದ್ದರೆ ನಿರಂತರವಾಗಿ ಈ ದೇಶದಲ್ಲಿ ಅಧಿಕಾರ ಮಾಡಬಹುದು. ಇಂಗ್ಲೀಷ್ ಜ್ಞಾನ ಅಥವಾ ಮೇಲ್ಜಾತಿ, ಮೇಲ್ಜಾತಿ ಅಥವಾ ಹಣ, ಹಣ ಅಥವಾ

ಇಂಗ್ಲೀಷ್ ಜ್ಞಾನ, ಈ ರೀತಿಯಾದಂತಹ ವ್ಯವಸ್ಥೆಯ ಸನ್ನಿವೇಶದಲ್ಲಿ ನಾವು ಇದನ್ನು ತಂದರೆ ಏನಾಗಬಹುದು? ಅದು ಯಾರು ಕ್ಷೇತ್ರಕ್ಕೆ ಮೀಸಲಾಗುತ್ತದೆ ಎನ್ನುವುದು ಬೇರೆ ವಿಷಯ. ಆದರೆ ಇದನ್ನು ನಾವು ವೈಜ್ಞಾನಿಕವಾಗಿ ಪರಿಹಾರ ಮಾಡುವುದರ ಬಗ್ಗೆ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಇಲ್ಲಿಯ ನಾಯಕರುಗಳು ಹೋಗಿ ಆ ವಿಚಾರವನ್ನು ಮನಗಣನೆಗೆ ತರುವಂತಹ ಒಂದು ಪ್ರಯತ್ನ ಆಗಬೇಕಾದಂತದ್ದಕ್ಕೆ ಪ್ರಥಮ ಆದ್ಯತೆ. ಒಂದು ವೇಳೆ ಆಗುತ್ತದೋ ಬಿಡುತ್ತದೋ ಬೇರೆ ಅದು ಇವತ್ತಿನ ಸನ್ನಿವೇಶದಲ್ಲಿ ರಾಜಕೀಯ ಅಸ್ಥಿರತೆ, ಹೋರಾಟ ಇವೆಲ್ಲವುಗಳೂ ಇರತಕ್ಕಂಥ ಸನ್ನಿವೇಶದಲ್ಲಿ ಪ್ರಾಯಶಃ ಶ್ರೀರಾಮರೆಡ್ಡಿಯವರು ಮನಸ್ಸು ಮಾಡಿದರೆ ಸ್ವಲ್ಪ ಮಟ್ಟಿಗೆ ಸಾಧ್ಯವಾಗಬಹುದು. ಏಕೆಂದರೆ ಅವರು ಅಧಿಕಾರದ ಒಳಗಡೆ ಇಲ್ಲದೆ ಅಧಿಕಾರದ ಹೊರಗಡೆ ಇದ್ದು ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಪ್ರಭಾವ ಬೀರತಕ್ಕಂಥವರು. ಆದ್ದರಿಂದ ಇದನ್ನು ಸ್ವಲ್ಪ ಅಲ್ಲಿ ಮನವರಿಕೆ ಮಾಡಿಕೊಡತಕ್ಕಂಥ ಕೆಲಸವನ್ನು ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮತ್ತು ಹಿರಿಯರಾದಂತಹ ಮಲ್ಲಿಕಾರ್ಜುನ ಖರ್ಗೆಯಂತಹವರ ಜೊತೆಗೆ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ವಾಟಾಳ್‌ರವರೆ, ನಾನು ಹೇಳಿದ ಮೇಲೆ ತಾವು ಹೇಳಿ. ಆದ್ದರಿಂದ ಒಂದನೆಯ ಪ್ರಯತ್ನ ಇದಾಗಬೇಕು. ಇನ್ನು ಎರಡನೇ ಪ್ರಯತ್ನವೆಂದರೆ ತಮ್ಮಲ್ಲಿಗೆ ಬಂದಿರತಕ್ಕಂಥ ಈ ಜನಸಂಖ್ಯೆ ಮತ್ತು ನಮ್ಮಲ್ಲಿರತಕ್ಕಂತ ನಕಾಶೆ, ಅವರೇನು ತಯಾರು ಮಾಡಿದ್ದಾರೆ, ಅದನ್ನು ಪ್ರತಿಯೊಬ್ಬ ಶಾಸಕರುಗಳಿಗೆ ಅಥವಾ ಅಲ್ಲಿಯ ಪಕ್ಷದ ನಾಯಕರಿಗಳಿಗೆ ಕೊಟ್ಟು ನಿಮ್ಮ ಶಾಸಕರ ಜೊತೆ ಸಮಾಲೋಚಿಸಿ ಎನ್ನುವಂತಹ ಕೆಲಸವಾಗಬೇಕು. ಅವರು ಅದನ್ನು ಸರಿಪಡಿಸತಕ್ಕಂಥಾದ್ದು ಆಗುತ್ತದೆ. ಎಷ್ಟೋ ಸಲ ದುರುದ್ದೇಶದಿಂದ ಆಗಿರತಕ್ಕಂಥಾದ್ದು ಇರುತ್ತದೆ, ತಪ್ಪಿನಿಂದ ಆಗಿರತಕ್ಕಂಥಾದ್ದು ಇರುತ್ತದೆ. ಇದು ಯಾರದೋ ತೆಗೆದು ಯಾರದೋ ಕಡೆಗೆ ಇಡಬೇಕು ಎನ್ನುವಂತಹ ಪ್ರಯತ್ನಗಳು ಆಗಿರುತ್ತವೆ. ಅಂತಹ ಪ್ರಯತ್ನವಾಗಿ, ನಾನು ಇಲ್ಲಿ ಮಾತನಾಡುವಾಗ ಸ್ಪಷ್ಟವಾಗಿ ಇರಬೇಕು ಎನ್ನುವುದಕ್ಕೆ ಒಂದು ಉದಾಹರಣೆ. ಅದನ್ನು ನಾನು ವೈಯುಕ್ತಿಕವಾಗಿ ಹೇಳುತ್ತೇನೆ. 1978 ರಲ್ಲಿ ಈ ರೀತಿ ಮತಕ್ಷೇತ್ರದ ಪುನರ್ ವಿಂಗಡನೆ ಆಗುವಾಗ ಸೊಂಡೂರನ್ನು ನಾವು ಪರಿಶಿಷ್ಟ ಜಾತಿಯ ಮೀಸಲಾತಿ ಮಾಡಬೇಕೆಂದು ನಾವೇನೋ ಎಕ್ಸರ್‌ಸೈಜ್ ಮಾಡಿ Shanthi Bhushan ಕಡೆಗೆ ಎಲ್ಲಾ ಹೋಗಿ ಇಲ್ಲೆಲ್ಲರ ಕಡೆಗೆ ಕೊಟ್ಟುಬಂದೆವು. ನಮಗಿಂತ ಪ್ರಭಾವಿಗಳು ಅವರಿದ್ದುದ್ದರಿಂದ, ಅವರು ಅದನ್ನು ಮತ್ತೊಂದು ಬೇರೆ ಬೇರೆ ರೀತಿಯಲ್ಲಿ ಮಾತನಾಡಿ ಆ ಕ್ಷೇತ್ರದ ಸ್ವರೂಪ ಬದಲಾಗಿದ್ದರೂ ಕೂಡ ಅದು ಸಾಮಾನ್ಯ ಕ್ಷೇತ್ರವಾಯಿತು. ಅಂದರೆ ನಮ್ಮಂತಹವರೇ ರಾಜಕೀಯದಲ್ಲಿ ಒಂದೊಂದು ಸಲ ಯಾರನ್ನು ನಾವು ಸೋಲಿಸುದಕ್ಕಾಗುವುದಿಲ್ಲವೆಂದು ಗೊತ್ತಾದರೆ, ಇನ್ಯಾರೋ ಪ್ರಭಾವಿಗಳು ಆಗುತ್ತಾರೆ ಎಂದಾಗ ಬೇರೆ ಬೇರೆ ಏರಿಯಾಗಳನ್ನು ಸೇರಿಸಿ ಮಾಡತಕ್ಕಂಥಾದ್ದು ಇದೆ. ಮಾನ್ಯ ರವಿಯವರು ಚರ್ಚೆ ಮಾಡಿದಂತೆ 18 ಸಾವಿರಕ್ಕೆ ಮಲೆನಾಡಿನ ಪ್ರದೇಶದಲ್ಲಿ ಜನಸಂಖ್ಯೆ ಮೇಲೆದ್ದರೆ ನಮ್ಮ ಕರ್ನಾಟಕ ಪಂಚಾಯತ್ ರಾಜ್ ಆಕ್ಟ್‌ನಲ್ಲಿ ಕೊಡಗಿನಲ್ಲೆ 18 ಸಾವಿರಕ್ಕೆ ಒಬ್ಬರು ಜಿಲ್ಲಾ ಪಂಚಾಯತ್ ಸದಸ್ಯರಿದ್ದಾರೆ. ಆ ರೀತಿಯಾಗಿ ನಾವೇ ಮಾಡಿದ್ದೇವೆ.

ಹಾಗೆಯೇ ಪಾರ್ಲಿಮೆಂಟ್‌ನಲ್ಲಿ people's Representation Act ನಲ್ಲಿ ವ್ಯತ್ಯಾಸವಿದೆ. ಅಂಡಮಾನ್, ನಿಕೋಬಾರ್‌ನಲ್ಲಿರುವಂತಹದ್ದು ಕೇವಲ 50 ಸಾವಿರ ಜನರಿಗೆ ಒಬ್ಬರು ಲೋಕಸಭಾ ಸದಸ್ಯರು ಆಗುತ್ತಾರೆ. ಅದೇ ರೀತಿಯಲ್ಲಿ 15 ಸಾವಿರ ಜನರಿಗೆ ನಮ್ಮ ಗ್ರಾಮ ಪಂಚಾಯತ್‌ನಲ್ಲಿ ಗೆದ್ದು ಬಂದಂತೆ ಎಂ.ಎಲ್.ಎ.ಗಳಾಗಿ ಗೆದ್ದು ಬರುತ್ತಾರೆ. ಆ ಕಾರಣಗಳಂತೆ ಈ ರೀತಿಯ ಸ್ವಾತಂತ್ರ್ಯ ನಮಗೆ ಇರುವುದರಿಂದ ಅದರ ಬಗ್ಗೆಯೂ ಪುನರ್ ವಿಮರ್ಶೆಯಾಗುವಂಥಾದ್ದು ಇದೆ. ಇದರ ಬಗ್ಗೆ ಕಾಯಿದೆ ಪಂಡಿತರನ್ನು ಕರೆಸಿ, ತಾವು ಮನವರಿಕೆಯನ್ನು ಮಾಡಿಕೊಂಡು, ನಮ್ಮ ಪಕ್ಷದ ಎಲ್ಲಾ ಮುಖಂಡರ ಜೊತೆಗೆ ಚರ್ಚಿಸಿ ಆ ಮ್ಯಾಪ್ ಅನ್ನು ಕೊಡಬೇಕು. 9ನೇ ತಾರೀಖಿನಂದು ಮೊದಲನೆಯ ಮೀಟಿಂಗ್ ಅನ್ನು ಮಾಡುವಾಗ ಸಲಹಾ ಸ್ವರೂಪದಂತೆ ಮಾಡುವಂಥಾದ್ದು ಅಗತ್ಯ ಈಗಾಗಲೇ ಆಂಧ್ರಪ್ರದೇಶದಲ್ಲಿ ಮಾಡಿ, ನೋಟಿಫಿಕೇಷನ್ ಅನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದ ಈ ಆಯೋಗ ಬಹಳ ಅವಸರದಲ್ಲಿ ಇದೆ. ಈಗಾಗಲೇ ತಡವಾಗಿದೆಯೆಂಬ ಕಾರಣಕ್ಕಾಗಿ, ಅವರು ಯಾವುದೇ ಸಮಯದಲ್ಲಿ ನಿಮ್ಮ ಮಾತನ್ನು ಕೇಳಬೇಕೆಂದು ಇಲ್ಲ. ಇದೊಂದು ಸಲಹೆಯನ್ನು ಕೊಡುವಂತಹ ಒಂದು ಸಮಿತಿ. ಈ ಸಲಹೆಯನ್ನು ಕೊಡಬೇಕಾದರೆ ನಿಮ್ಮ ಹತ್ತಿರ ಮಾಹಿತಿಗಳು ಇರಬೇಕಾಗುತ್ತದೆ. ಆ ಮಾಹಿತಿಗಳನ್ನು ಕೊಡಬೇಕಾದರೆ ನಮ್ಮ ಎಂ.ಎಲ್.ಎ.ಗಳು ಮತ್ತು ಅಲ್ಲಿನ ರಾಜಕೀಯ ಮುಖಂಡರುಗಳು ಕೊಡುತ್ತಾರೆ. ಆ ಕಾರಣಕ್ಕಾಗಿ ತಾವು 9ನೇ ತಾರೀಖಿನಂದು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಅದನ್ನು ಮುಂದುವರೆಸುವುದಕ್ಕೆ ಸಾಧ್ಯತೆಗಳು ಇದ್ದರೆ, ಅದನ್ನು ಮುಂದುವರೆಸಿ, ಇಲ್ಲವೆಂದರೆ ಈ 5ನೇ ತಾರೀಖಿನವರೆಗೂ ಸದನವಿರುವುದರಿಂದ ಎಲ್ಲರಿಗೂ ಈ ಗಹನವಾದ ವಿಚಾರದ ಬಗ್ಗೆ ಮನವರಿಕೆಯನ್ನು ಮಾಡಿ, ಅವರಿಗೆ ಮ್ಯಾಪ್‌ಗಳನ್ನು ಕೊಟ್ಟು, ಅವರ ಸಲಹೆಯನ್ನು ತೆಗೆದುಕೊಂಡು, ಆ ಸಲಹೆಯನ್ನು ತಾವು ಅಲ್ಲಿ ಪ್ರಸ್ತಾಪ ಮಾಡುವಂಥಾದ್ದು ಬಹಳ ಮುಖ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ಈ ಎರಡು ರೀತಿಯಲ್ಲಿ ಹೋದಾಗ ಮಾತ್ರ ಸಾಧ್ಯವಾಗುತ್ತದೆ, ಏಕೆಂದರೆ ಈಗಾಗಲೇ ಆಂಧ್ರಪ್ರದೇಶದಲ್ಲಿ ಮುಗಿದು ಹೋಯಿತು. ಇನ್ನು ಮಾನ್ಯ ವಿಶ್ವನಾಥ್ ಪಾಟೀಲ್‌ರವರು ಪ್ರಸ್ತಾಪ ಮಾಡಿದಂತೆ, 36 ಜನ ವಿಶೇಷ ತಹಶೀಲ್ದಾರರ ನೇಮಕಾತಿಯನ್ನು ಮಾಡಿದ್ದೀರಿ, ಹೊಸ ಜಿಲ್ಲೆಗಳ ರಚನೆ ಮಾಡಿದ್ದೀರಿ, ಇಂತಹ ವಿಚಾರಗಳ ಪ್ರಶ್ನೆ ಇಲ್ಲ. ದಿ: 2.8.2002ರ ನಂತರ ಯಾವುದೇ ಮತದಾರರ ಕ್ಷೇತ್ರಗಳನ್ನು ನಾವು ಪ್ರಕಟಣೆ ಮಾಡುವವರೆಗೂ, ಹೊಸ ತಾಲ್ಲೂಕುಗಳನ್ನಾಗಿ, ಹೊಸ ಹೊಸ ಹೋಬಳಿಗಳನ್ನಾಗಲಿ, ಹೊಸ ಜಿಲ್ಲೆಗಳನ್ನು ಮಾಡಬಾರದೆಂದು ಚುನಾವಣಾ ಆಯುಕ್ತರೇ ನಮಗೆ ಆದೇಶವನ್ನು ಕೊಟ್ಟಿದ್ದಾರೆ. ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಇದೆ ಆದರೂಕೂಡ ಅಸಹಾಯಕತೆಯಲ್ಲಿ ಏಕೆ ಇದ್ದೇವೆಂದರೆ, ದಿ: 2.8.2002ರ ನಂತರ ಮತದಾದರ ಕ್ಷೇತ್ರಗಳ ಪುನರ್ ವಿಂಗಡನೆಯ ಕೆಲಸ ಮುಕ್ತಾಯವಾಗುವವರೆಗೂ, ಗಡಿಗಳನ್ನು ಬದಲಿಸಬಾರದು. ಅದು ಹೋಬಳಿಯ ಗಡಿಗಳನ್ನು ಬದಲಾಯಿಸಬಾರದು, ಜಿಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಗಡಿಗಳನ್ನು ಬದಲಾಯಿಸಬಾರದೆಂಬ ಆದೇಶವಿರುವುದರಿಂದ, ನಾವು ಎಷ್ಟೇ ಬಯಸಿದರೂ ಅದು ಆಗುವುದಿಲ್ಲ. ಇದು ಬಹಳ

ಗಂಭೀರವಾದಂತಹ ವಿಷಯ, ತಾವು ಪ್ರತ್ಯೇಕವಾಗಿ ಫ್ಲೋರ್ ಲೀಡರ್‌ಗಳನ್ನಾದರೂ ಕರೆಸಿ, ಅಥವಾ ರಾಜಕೀಯ ಪಕ್ಷಗಳ ಅಧ್ಯಕ್ಷರನ್ನಾದರೂ ಕರೆಸಿ ತಾವು ಮಾತನಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದನಾಕರು) : ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಮುಖವಾದ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾವು ಕತ್ತಲೆಯಲ್ಲಿ ಇದ್ದೇವೆ, ದಿ: 1.9.2004, ಕರ್ನಾಟಕ ಲೆಜಿಸ್ಲೇಚರ್ ಅಸೆಂಬ್ಲಿಯಿಂದ, Bernard John, under secretary Delimination commission of India ರವರಿಗೆ ತಮ್ಮ ಸೆಕ್ರೆಟರಿಯೇಟ್‌ಯಿಂದ ಒಂದು ಪತ್ರ ಹೋಗಿದೆ. ಆ ಪತ್ರದಲ್ಲಿ ಸಭಾಧ್ಯಕ್ಷರಾದ ತಾವು ಸದಸ್ಯರು ಆಗಿರತ್ತೀರಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇರುತ್ತಾರೆ, ಸನ್ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಇರುತ್ತಾರೆ, ಮಾನ್ಯ ಜಗದೀಶ್‌ಶೆಟ್ಟರ್ ಇರುತ್ತಾರೆ ಮತ್ತು ಮಾನ್ಯ ವೀರಬಸವಂತ ರೆಡ್ಡಿ ಮುದ್ನಾಳ್ ಎಂದು ಐದು ಜನ ಸದಸ್ಯರುಗಳು ಹೆಸರನ್ನು ಇಲ್ಲಿಂದ ಕಳುಹಿಸಿಕೊಟ್ಟಿದ್ದೀರಿ, ನಾನು ಆಗುವುದಿಲ್ಲವೆಂದು ಹೇಳಿ, ಅದಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರ ಹೆಸರನ್ನು ಹಾಕಿ ಎಂದು, ಆ ದಿವಸ ನಾನು ಸಲಹೆಯನ್ನು ಕೊಟ್ಟಿದ್ದೆ. ನಾನು ವಿರೋಧಪಕ್ಷದ ನಾಯಕನಾಗಿ ನನಗೆ ಬಿಡುವು ಇರುವುದಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಹಿಂದೆ ಎಲ್ಲವನ್ನೂ ಅಭ್ಯಾಸ ಮಾಡಿದ್ದರು. ಅವರು ಇರಲಿ ಎಂದು ಹೇಳಿದ್ದೆ. ಈ ಪತ್ರ ದಿ:1.9.2004ರಂದು ಹೋದ ಮೇಲೆ, ಈ ನಿಮಿಷದವರೆಗೂ ಇವರು ಯಾವುದೇ ಸಭೆಯನ್ನು ಕರೆದಿಲ್ಲ. ಅಂದರೆ ಇದು ಯಾವುದೇ ಕಾರಣಕ್ಕಾಗಿ ರಾಜ್ಯದಿಂದ ಒಂದು ಸಮಿತಿಯನ್ನು ಮಾಡಿ ಕಳುಹಿಸುವಂಥಾದ್ದು, ಅವರಿಂದ ಪತ್ರ ಬಂದಮೇಲೆ ನೀವು ಇದನ್ನು ಕಳುಹಿಸಿದ ಮೇಲೆ, ನೀವು ಇದಕ್ಕೆ 5 ಜನರನ್ನು ಸದಸ್ಯರೆಂದು ಏನು ಹಾಕಿದ್ದೀರಿ, ಅವರ ಒಂದು ಸಭೆಯು ದೆಹಲಿಯಲ್ಲಾಗಲಿ, ಕರ್ನಾಟದ ರಾಜ್ಯದಲ್ಲಾಗಲಿ, ಆಗಿಲ್ಲ. ಅಂದರೆ ಯಾರನ್ನು ಸಭೆಗೆ ಕರೆಯದೆ, ಇಷ್ಟೊಂದು ಮುಂದೆ ಹೊರಟು ಹೋಗಿದ್ದಾರೆಂದರೆ, ಇದಕ್ಕೆ ಅರ್ಥವಿಲ್ಲ. ಈ ವ್ಯವಸ್ಥೆಗೆ ಅರ್ಥವಿಲ್ಲದಂತೆ ಆಗುತ್ತದೆ. ಆದುದರಿಂದ ತಾವು ನಮಗೆ ಬಹಿರಂಗಪಡಿಸಬೇಕು, ಇಲ್ಲವೆಂದರೆ ತಮ್ಮ ಕೊಠಡಿಗಾದರೂ ಕರೆದು ಹೇಳಬೇಕು. ಈ ಐದು ಜನರ ಹೆಸರನ್ನು ಕಳುಹಿಸಿದ ಮೇಲೆ ಮತ್ತೆ ಪತ್ರ ಬಂದಿದೆಯಾ? ಅವರು ಈ 5 ಜನರ ಹೆಸರುಗಳನ್ನು ಒಪ್ಪಿಕೊಂಡಿದ್ದಾರಾ? ಯಾವ್ಯಾವ ರಾಜ್ಯಗಳಲ್ಲಿ ಈ ರೀತಿ ಕಳುಹಿಸಿದ ಮೇಲೆ, ಮೊದಲನೆಯ ಸಲ ಬೇರೆ ರಾಜ್ಯಗಳಲ್ಲೂ ಆಗಿರಬೇಕಾದರೆ, ಇದರ ಬಗ್ಗೆ ಕನ್‌ಸಲ್ಟೇಶನ್ ಮುಗಿದು, ಆಗಲೇ ಅಂತಿಮ ಪಟ್ಟಿಯು ತಯಾರಾಗುತ್ತಿರಬೇಕಾದರೆ ನಮ್ಮ ರಾಜ್ಯದಿಂದ , ನಮ್ಮ ಸದಸ್ಯ ಪ್ರತಿನಿಧಿಗಳೊಂದಿಗೆ ಚರ್ಚೆ ಮಾಡದೇ, ದೆಹಲಿಯಲ್ಲಿ ಮುಂದೆ ಹೋಗಿದ್ದಾರೆಂದರೆ, ಇದಕ್ಕೆ ಅರ್ಥವಿಲ್ಲದ ಹಾಗೆ ಆಗುತ್ತದೆ. ಇದು ಯಾವುದೋ ಒಂದು ರೀತಿ ಸರ್ವಾಧಿಕಾರಿಯ ವ್ಯವಸ್ಥೆಯಲ್ಲಿದೆ, ಎಂದರೆ ಆಗಬಹುದು. ಆದರೆ ಯಾರಿಗೆ ಏನೇ ಅಧಿಕಾರವನ್ನು ಕೊಟ್ಟಿದ್ದರೂ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದಸ್ಯರುಗಳ ಅಭಿಪ್ರಾಯವನ್ನು ಕೇಳುತ್ತೇವೆಂದು, ಹೇಳಿದ ಮೇಲೆ ನೀವು ಕೇಳಬೇಕಾಗಿತ್ತು. ಅನಂತರ ಡಿಸಿಷನ್ ಅವರು ಏನು ಬೇಕಾದರೂ ತೆಗೆದುಕೊಳ್ಳಲಿ. ಅದು ಜನಸಂಖ್ಯೆಯ ಆಧಾರದ ಮೇಲೆ ಆಗಬೇಕು. ಹಿಂದೆ ಇರುವಂತಹ ಗೊಂದಲವು ಸರಿಹೋಗಬೇಕೆನ್ನುವ ದೃಷ್ಟಿಯಿಂದ, ಈ ಕ್ಷೇತ್ರ ಮರು ವಿಂಗಡನೆಯ ಕೆಲಸವು ಪ್ರಾರಂಭವಾಗಿರಬೇಕಾದರೆ, ಈ ಸಮಿತಿ ಹೀಗೆ ಇರಬೇಕೆಂದು

ಸ್ಪೀಕರ್ ಆಗಿ ನೀವು ಒಂದು ಪತ್ರವನ್ನು ಬರೆದ ಮೇಲೆ, ಇಲ್ಲಿ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ಒಂದು ಸಭೆಯನ್ನು ಇರುವರೆಗೂ ಕರೆಯದೇನೇ ಈ ಪಟ್ಟಿಯನ್ನು ಒಪ್ಪಿಕೊಂಡಿದ್ದಾರೆಂಬ ಪತ್ರ ಬಂದಿದೆಯಾ ಅಥವಾ ನಮಗೆ ಗೊತ್ತಿಲ್ಲದೇ ತಮ್ಮನ್ನು ಸಭೆಗೆ ಏನಾದರೂ ಆಮಂತ್ರಣ ಮಾಡಿದ್ದಾರಾ? ಈ ವಾಸ್ತವ ಸ್ಥಿತಿ ಏನೆಂಬುದನ್ನು ಹೇಳದೇ ಇದ್ದರೆ, ನಾವು ಕತ್ತಲೆಯಲ್ಲಿ ಇರುತ್ತೇವೆ. ಆ ಕ್ಷೇತ್ರ ಹೇಗಾಗಬೇಕು, ಅದು ಜನಸಂಖ್ಯೆಯ ಆಧಾರದ ಮೇಲೆ ಆಗಬೇಕು, ಯಾವ ಸೆನ್ಸ್‌ಸ್ ಮೇಲೆ ಆಗಬೇಕು ನಾವು ಅದರ ಬಗ್ಗೆ ಆಮೇಲೆ ಚರ್ಚೆಮಾಡುವಂಥಾದ್ದು. ಇನ್ನು ಪೂರ್ವಭಾವಿಯಾಗಿ ಇನ್ನೂ ಒಂದು ಸಭೆಯು ಆಗಿಲ್ಲ. ಈ ಐದು ಜನ ಸದಸ್ಯರು ನಮಗೆ ಗೊತ್ತಿಲ್ಲವೆಂದು ಹೇಳುವುದಾದರೆ, ಇದಕ್ಕೆ ಅರ್ಥವಿಲ್ಲದ ಹಾಗೆ ಆಗುತ್ತದೆ. ಆದುದರಿಂದ ತಮಗೆ ಏನಾದರೂ ಮಾಹಿತಿ ಇದ್ದರೆ, ದಯಮಾಡಿ ನಮಗೆ ತಿಳಿಸಬೇಕು. ಈ ಪತ್ರಕ್ಕೆ ಕನ್‌ಫರ್ಮ್ ಆಗಿ ಉತ್ತರ ಬಂದಿದೆಯಾ ಎಂಬುದನ್ನು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ನಮ್ಮ ಗಮನಕ್ಕೆ ಬಂದೇ ಇಲ್ಲ, ನಮಗೆ ಗೊತ್ತೇ ಇಲ್ಲ. ಈಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹೇಳಿದಂತೆ ನಾವು ಖಂಡಿತವಾಗಿ ನಾವಂತೂ ಕತ್ತಲೆಯಲ್ಲಿ ಇದ್ದೇವೆ. ನಮಗೆ ಗೊತ್ತೇ ಇಲ್ಲ. ಈ ಸದಸ್ಯರನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ? ನನಗೆ ಅರ್ಥವಾಗಲಿಲ್ಲ, ಇಲ್ಲಿ ನಾವು ಬೇರೆ ಬೇರೆ ಪಕ್ಷದವರು ಇದ್ದೇವೆ, ಇಲ್ಲಿ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಇದ್ದಾರೆ; ನಾವು ಇದ್ದೇವೆ, ಮಾನ್ಯ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಇದ್ದಾರೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಇದ್ದಾರೆ. ಇದು ಯಾವ ಆಧಾರದ ಮೇಲೆ ಮಾಡಿದ್ದಾರೆ, ಮತ್ತು ಒಂದೇ ಜಿಲ್ಲೆಯ 2–3 ಜನ ಇದ್ದಾರೆ. ಇದನ್ನು ಕಳುಹಿಸುವಾಗ ಸಮಗ್ರವಾದಂತಹ ಪ್ರಾತಿನಿಧ್ಯವಿರುವಂಥಾದ್ದು ಕಳುಹಿಸುವಂಥಾದ್ದು ಒಂದು ಮತ್ತೆ ಕಳುಹಿಸಿದ್ದೇವೆಂದು ಈ ಸದನದಲ್ಲಿ ಆದರೂ ಹೇಳಬೇಕಾಗಿತ್ತು. ತಾವಾದರೂ ಸಭೆಯನ್ನು ಕರೆಯಬೇಕಾಗಿತ್ತು. ಈ ರೀತಿ ಮಾಡುತ್ತೇವೆಂದು ಹೇಳಬೇಕಾಗಿತ್ತು. ಆದರೆ ಯಾರೂ ಕರೆದಿಲ್ಲ, ಮತ್ತು ಒಬ್ಬರನ್ನಾದರೂ ಭೇಟಿ ಮಾಡಿ, ನಿಮ್ಮ ಕ್ಷೇತ್ರ ಏನು? ನಿಮ್ಮಲ್ಲಿ ಎಷ್ಟು ಮತದಾದರೂ ಯಾವ ರೀತಿ ಮಾಡುವುದು, ಎಂಬ ಬಗ್ಗೆ ಇವರು ರಾಜ್ಯ ಪ್ರವಾಸವನ್ನು ಮಾಡದೇ, ಗಂಭೀರವಾಗಿ ಕುಳಿತಿದ್ದಾರೆ. ನನಗೆ ಅರ್ಥವಾಗಲಿಲ್ಲ, ಈ ಸಮಿತಿಯನ್ನು ಯಾವ ಆಧಾರದ ಮೇಲೆ ಮಾಡಿರುವಂಥಾದ್ದು ಈ ಸಮಿತಿಯು ನಮ್ಮ ಕಣ್ಣು ತಪ್ಪಿಸಿ ಹೋಗುವುದಕ್ಕೆ ಸಾಧ್ಯವಿಲ್ಲ. ತಾವು ದಯಮಾಡಿ ಮತ್ತೆ ಸಮಿತಿಯ ಬಗ್ಗೆ ಪುನರ್ ಪರಿಶೀಲನೆಯನ್ನು ಮಾಡಬೇಕು. ಇದಕ್ಕೆ ಬೇರೆ ಸಮಿತಿಯನ್ನು ಮಾಡಬೇಕಾಗುತ್ತದೆ. 9ನೇ ತಾರೀಖು ಮುಗಿಯುವುದರೊಳಗಾಗಿ, ತಾವು ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ, ಮಾನ್ಯ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ, ಎಲ್ಲಾ ಪಕ್ಷದ ಮುಖಂಡರುಗಳು ದೆಹಲಿಗೆ ಹೋಗಿ ಅಲ್ಲಿರುವಂತಹ ಎಲ್ಲಾ ಪಕ್ಷಗಳ ಮುಖಂಡರುಗಳನ್ನು ಲೋಕಸಭೆಯ ಎಲ್ಲಾ ಪಕ್ಷದ ಮುಖಂಡರುಗಳನ್ನು ಭೇಟಿ ಮಾಡಬೇಕು, ಮತ್ತೆ ಮಾನ್ಯ ಕುಲದೀಪ್ ಸಿಂಗ್‌ರವರನ್ನು ಭೇಟಿ ಮಾಡಬೇಕು. ಅವರನ್ನು ಭೇಟಿ ಮಾಡಿ, 9ನೇ

ತಾರೀಖು ಇರುವಂಥಾದ್ದನ್ನು ಮುಂದಕ್ಕೆ ಹಾಕಿ ಎಂದು ಹೇಳಬೇಕು, ಮತ್ತೆ ಸಮಗ್ರವಾಗಿ ಇಡೀ ಕರ್ನಾಟಕ ರಾಜ್ಯದ ಡೀಲಿಮಿಟೇಷನ್ ಏನು ಇದೆ, ಇದನ್ನು ನಾವು ಸಮಗ್ರವಾಗಿ ಕೊಡುತ್ತೇವೆಂದು ಹೇಳಿ, ಇದಕ್ಕೆ ಕಾಲಾವಕಾಶವನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ. ಈ ಸಮಿತಿಯು ಅಷ್ಟೊಂದು ಏನೂ ಸಮಂಜಸವಾಗಿಲ್ಲವೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾವು ಈ ವಿಷಯವನ್ನು ಸಭೆಯಲ್ಲಿ ಚರ್ಚೆ ಮಾಡಿದ ದಿವಸ, ವಿಧಾನ ಸಭೆಯಿಂದ ಯಾರೂ ಪ್ರತಿನಿಧಿಗಳು ಇಲ್ಲ. ಪಾರ್ಲಿಮೆಂಟ್‌ನಿಂದ ಮಾತ್ರ ಮೆಂಬರ್ಸ್ ಇದ್ದಾರೆಂದು ಇಲ್ಲಿ ಹೇಳಿಕೆ ಆಗಿದೆ. ಇದು ಶೇ. 99 ಭಾಗ ಪ್ರಿವಿಲೇಜ್ ಆಗುತ್ತದೆ. ಅವತ್ತು ಈ ಕಮಿಟಿ ಆಗಿತ್ತು. ತಮ್ಮ ಸ್ಥಾನದಿಂದಲಾದರೂ ಇದನ್ನು ಹೇಳಬಹುದಾಗಿತ್ತು. ಇಲ್ಲ, ನಾವು ಶಾಸನಸಭೆಯಿಂದ ಇಂತಿಂಥವರನ್ನ ಕಳುಹಿಸಿದ್ದೇವೆಂದು, ಇಂಥವರನ್ನು ಆಯ್ಕೆ ಮಾಡಿದ್ದೇವೆಂದು ಹೇಳಬಹುದಾಗಿತ್ತು. ಕನಿಷ್ಟ ಸೌಜನ್ಯಕ್ಕೆ ನಾವು ಒಂದೊಂದು ಪಕ್ಷಕ್ಕೆ ಸೇರಿದವರು ಇಲ್ಲಿದ್ದೇವೆ. ನಮಗೆ ಕರೆದು ಈ ರೀತಿಯಾಗಿ ಮಾಡುತ್ತಿದ್ದೇವೆ, ಈಗ ನಾವು ಹಳೆಯ ಕಮಿಟಿಯ ಬದಲು, ಬೇರೆ ಕಮಿಟಿಯನ್ನು ತುಂಬುತ್ತಿದ್ದೇವೆಂದು ಹೇಳಬಹುದಾಗಿತ್ತು. ಇದು ಏತಕ್ಕೋಸ್ಕರ ನಡೆದಿದೆ? ಯಾರ ತೆವಲಿಗೆ ನಡೆದಿದೆ ? ಇದರ ಹಿಂದುಗಡೆ ಯಾರು ಇದ್ದಾರೆ? ಯಾರನ್ನು ಸೇವ್ ಮಾಡುವುದಕ್ಕೆ ಯಾರ ಆಸೆ ಆಮಿಷಗಳನ್ನು ಎತ್ತಿ ಹಿಡಿಯುವುದಕ್ಕೆ ಇದು ಆಗಿದೆಯೇಂಬುದೆಲ್ಲಾ ನಮಗೆ ಅರ್ಥವಾಗಬೇಕು. ಶಾಸನ ಸಭೆಯ ಸದಸ್ಯರಾಗಿ ನಾವು ಇಲ್ಲಿ ಚರ್ಚೆ ಮಾಡಿದ ದಿವಸ ಐದು ವೆಕೆನ್ಸಿಗಳು ಇವೆ. ಅದನ್ನು ಶಾಸನ ಸಭೆಯಿಂದ ಇದು ಫಿಲಪ್ ಮಾಡಿಲ್ಲ, ಬರೀ ಪಾರ್ಲಿಮೆಂಟ್‌ನ ಮೆಂಬರ್ ಇದ್ದಾರೆಂದು, ನಾವು ಕತ್ತಲೆಯಲ್ಲಿ ಇದ್ದೆವು. ಇಂತಹ ಒಂದು ಕಮಿಟಿಯನ್ನು ತಾವು ಶಿಫಾರಸ್ಸು ಮಾಡಿ ಕಳುಹಿಸಿದ್ದು ಇದಕ್ಕೆ ಸಂಬಂಧಪಟ್ಟಂತೆ ಒಂದು ನೋಟಿಫಿಕೇಷನ್ ಆಗಿಲ್ಲ; ಯಾವುದಾದರೂ ತಮ್ಮ ಕಚೇರಿಯಿಂದ ನೋಟಿಫಿಕೇಷನ್ ಹೋದರೆ, ಅದನ್ನು ಎಂ.ಎಲ್.ಎ.ಗಳಿಗೆ ಪತ್ರವನ್ನು ಬರೆದು ತಿಳಿಸಬೇಕು. ಇಲ್ಲಿ ಸರ್ವಾಧಿಕಾರಿ ಧೋರಣೆಯನ್ನು ಮಾಡಬಾರದು. ನಾನು ಬಹಳ ನೊಂದು ಮಾತನಾಡುತ್ತಿದ್ದೇನೆ. ಇಂತಹ ಒಂದು ಆದೇಶ ಮಾಡಿದಾಗ ನಿಮ್ಮ ಕಛೇರಿಗೆ ಏನೇನು ಬರುತ್ತದೆ; ಎಲ್ಲವನ್ನೂ ಮನೆಗಳಿಗೆ ಕಾಗದವನ್ನು ಬರೆದು ಕಳುಹಿಸುತ್ತಿದ್ದರು. ಇದರ ಬಗ್ಗೆ ಏಕೆ ಪತ್ರ ಬರೆದು ಕಳುಹಿಸಲಿಲ್ಲವೆಂಬುದರ ಬಗ್ಗೆ ಮೊದಲು ಈ ಶಾಸನಸಭೆಯ ಸದಸ್ಯರಿಗೆ ಅರ್ಥವಾಗಬೇಕು. ಈ ಸಮಿತಿಯನ್ನು ಮಾಡುವುದಕ್ಕೆ ಆಧಾರಗಳು ಏನು ಇದ್ದವು? ಇದರ ರೂಪುರೇಷೆಗಳು ಏನು ಇದ್ದವು? ಮತ್ತು ಯಾವ ಮಾನದಂಡವನ್ನು ಅನುಸರಿಸಿ, ಇಲ್ಲಿ ಮಾಡಿದ್ದೀರೆಂಬುದನ್ನು ಹೇಳಬೇಕಾಗುತ್ತದೆ. ನೀವು ಏಕಾಏಕಿ ಕುಳಿತುಕೊಳ್ಳುವುದು, ಒಂದು ಸಮಿತಿಯನ್ನು ಮಾಡುವುದು ನಾವು ಇಲ್ಲಿ ಏನೂ ಆಗಿಲ್ಲ, ನಿಧಾನವಾಗಿ ಆಗುತ್ತದೆ, ಇನ್ನೂ ಟೈಮ್ ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾ ಇದ್ದಾರೆ, ನಾವು ದೆಹಲಿಗೆ ಹೋಗುತ್ತೇವೆ. ಇವರ ಜೊತೆಗೆ ಕುಳಿತು ಮಾತನಾಡುತ್ತೇವೆಂದು ಹೇಳಿ ಸುಮ್ಮನೆ ಕುಳಿತಿದ್ದೇವೆ ಆ ದಿವಸ ನಾವು ಪ್ರಸ್ತಾಪ ಮಾಡಿದ್ದೆವು. ಮೊನ್ನೆ ದಿವಸ ಕೂಡ ನಿಮ್ಮ ಸ್ಟೇಟ್ ಎಲೆಕ್ಷನ್ ಕಮೀಷನ್‌ರವರು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಓದಿದ್ದೇನೆ, ಇಲ್ಲಿ, ಇಂತಹ ಶಿಫಾರಸ್ಸು ಕರ್ನಾಟಕದಲ್ಲಿ ನಡದೇ ಇಲ್ಲವೆಂದು ಹೇಳಿ ಮೂರು ನಾಲ್ಕು ದಿವಸಗಳಾಗಿವೆ. ಸ್ಟೇಟ್ ಎಲೆಕ್ಷನ್ ಕಮೀಷನರ್

ಆಫೀಸ್‌ನಿಂದ ಸ್ಪಷ್ಟವಾದ ಹೇಳಿಕೆ ಬಂದಿದೆ. ಕರ್ನಾಟಕದಿಂದ ಯಾವ ಶಿಫಾರಸ್ಸು ಇಲ್ಲ; ಯಾವ ಮಾಹಿತಿಯೂ ನಮಗೆ ಗೊತ್ತಿಲ್ಲ, ನಾವು ಡೀಲಿಮಿಟೇಷನ್ ಅನ್ನು ಶುರುಮಾಡಿಲ್ಲ, ಈ ಪ್ರಕ್ರಿಯೆಯನ್ನೇ ಆರಂಭ ಮಾಡಿಲ್ಲ ಎಂದು ಸ್ಟೇಟ್ ಎಲೆಕ್ಷನ್ ಕಮಿಷನ್ ಹೇಳಿಕೆಯನ್ನು ಕೊಡುತ್ತದೆ. ಇನ್ನೊಂದು ಕಡೆ ನಮಗೆ ಗಡವು ಫಿಕ್ಸ್ ಆಗಿದೆ, ಇದು ಮುಗಿದೇ ಹೋಗುತ್ತದೆ, ಎನ್ನುವುದು; ಇದು ಏನು ಆಗಬೇಕೋ ಆಗುತ್ತೆ ; ಈ ಸದನಕ್ಕೆ 225 ಜನ ಸದಸ್ಯರು ಬರಬೇಕಾದರೆ ಬರುತ್ತಾರೆ. ಆದರೆ ಕತ್ತಲೆಯಲ್ಲಿಟ್ಟು, ಗೊತ್ತಾಗದ ಹಾಗೆ ಇಂತಹ ಕೃತ್ಯಗಳನ್ನು ನಡೆಸುವಂತಹ ಸ್ಥಿತಿ ಯಾರಿಂದ ನಿರ್ಮಾಣವಾಗಿದೆ. ಏಕೆ ನಿರ್ಮಾಣವಾಗಿದೆಯೆಂಬುದು ಅರ್ಥವಾಗಬೇಕಾಗುತ್ತದೆ. ನಾವು ಸಾರ್ವಜನಿಕರ ಪರವಾಗಿ ಮಾತನಾಡುವುದಕ್ಕೆ ಇಲ್ಲಿ ಗೆದ್ದಿರುವುದು. ನಾವು ಸಾರ್ವಜನಿಕರ ಪರವಾಗಿ ಮಾತನಾಡುವುದಕ್ಕೆ ಈ ಸದನ ಇರುವುದು. ನಮ್ಮ ಅಭಿಪ್ರಾಯವನ್ನು ಅಲ್ಲಿ ಅಡ್ವೈಜರಿ ಕಮಿಟಿ ಹೇಳಿದ್ದು, ಫೈನಲ್ ಅಲ್ಲ. ಅದು ನನಗೆ ಗೊತ್ತು ನೀವು ಏನು ಇದ್ದರೂ ಹೋಗಬಹುದು, ಹೇಳಬಹುದು. ಟೀ ಕುಡಿಯಬಹುದು, ಗೋಡಂಬಿಯನ್ನು ಕೊಟ್ಟರೆ ತಿನ್ನಬಹುದು, ಎದ್ದು ಬರಬಹುದು ಅಷ್ಟೇ. ಅವರು ಕನ್ಸಿಡರ್ ಮಾಡಬಹುದು, ನಾಡದೇ ಇರಬಹುದು ನಿಯಮ ಸ್ಪಷ್ಟವಾಗಿ ಇದೆ. ಇದನ್ನು ಹೇಳುವುದಕ್ಕಾದರೂ ಒಂದು ಅವಕಾಶ ಇಲ್ಲ, ಮತ್ತೆ ಆ ಸಮಿತಿಗೆ ಜನ ಶಾಸನಸಭೆಯಲ್ಲಿ ಆಯ್ಕೆಯಾದವರು ನಮ್ಮ ಅಭಿಪ್ರಾಯವನ್ನು ಆದರೂ ಕೇಳಿ ಅಲ್ಲಿ ಪ್ರತಿಬಿಂಬಿಸಬೇಕಲ್ಲಾ, ಹಿಂದಿನ ಸರ್ಕಾರ ಇದ್ದಾಗ, ಕನಿಷ್ಟ ನಮ್ಮ ಪಕ್ಷಗಳಿಂದ ಬರೆದಿದ್ದರು, ಈ ರೀತಿ ಡೀಲಿಮಿಟೇಷನ್ ಮೀಟಿಂಗ್ ಕರೆಯುವಂಥ ಸ್ಥಿತಿಇದೆ. ಅವರು ಏನೇನು ಇದೆಯೆಂಬ ವಸ್ತು ಚಿತ್ರಣವನ್ನು ನಮ್ಮ ಗಮನಕ್ಕೆ ತನ್ನಿ, ತಾವು ವಾದ ಮಾಡುವುದಕ್ಕೆ, ಅಥವಾ ನಮ್ಮ ಅಭಿಪ್ರಾಯಗಳನ್ನು ಮಂಡಿಸುವುದಕ್ಕೆ ಸಹಾಯವಾಗುತ್ತದೆಂದು ಹೇಳುತ್ತಿದ್ದರು. ಇವತ್ತು ಏನೂ ಇಲ್ಲ ಏಕೆ ಸಮಿತಿ ಆಯಿತು ಸಮಿತಿ ಏನು ಮಾಡುತ್ತಿತ್ತು? ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ನಿಂತುಕೊಂಡು ಹೇಳಿಕೆಯನ್ನು ಕೊಟ್ಟಿದ್ದಾರೆ. ನಿಮ್ಮನ್ನೆಲ್ಲಾ ದೆಹಲಿಗೆ ಕರೆದುಕೊಂಡು ಹೋಗುತ್ತೇನೆ, ಅಲ್ಲಿ ಕುಳಿತುಕೊಳ್ಳುತ್ತೇನೆ, ಜಸ್ಟೀಸ್ ಕುಲದೀಪ್‌ಸಿಂಗ್ ಹತ್ತಿರ ಮಾತನಾಡೋಣವೆಂದು ಹೇಳಿದ್ದರು. ಈ ಮಧ್ಯೆ 9ನೇ ತಾರೀಖು ಅಂತಿಮವಾಗುತ್ತದೆ ಎಂದರೆ, ನಾವ್ಯಾರೂ ಈ ರಾಜ್ಯದಲ್ಲಿ ಜನ ಪ್ರತಿನಿಧಿಗಳು ಎಂದು ಇರಬೇಕಾದ ಸ್ಥಿತಿ ಇಲ್ಲ. ಇದನ್ನು ನಾವು ನಿರ್ದಾಕ್ಷಿಣ್ಯವಾಗಿ ವಿರೋಧ ಮಾಡಬೇಕಾಗುತ್ತದೆ. ಬೇಕಾದಷ್ಟು ಕಾರಣಗಳಿವೆ. ಇವರು ಸಿಕ್ಕಿಂನಲ್ಲಿ ನಮ್ಮ ಹಾಗೇ ಪಾಪ್ಯುಲೇಷನ್ ಆಧಾರದ ಮೇಲೆ ಮಾಡುವುದಿಲ್ಲ, ನಾಗಾಲ್ಯಾಂಡಿನಲ್ಲಿ ನಮ್ಮ ಹಾಗೇ ಪಾಪ್ಯುಲೇಷನ್ ಆಧಾರದ ಮೇಲೆ ಮಾಡುವುದಿಲ್ಲ, ಲಕ್ಷದ್ವೀಪದಲ್ಲಿ ನಮ್ಮ ಹಾಗೇ ಮಾಡಲು ಆಗುವುದಿಲ್ಲ. ಬೇರೆಬೇರೆ ಕಡೆಗೆ ಬೇರೆಬೇರೆ ಅನುಕೂಲಗಳಾಗುವ ಸ್ಥಿತಿ ಇದೆ. ಕರ್ನಾಟಕದಲ್ಲಿ ಆಗಲೆಬೇಕಾಗಿದೆ. ಇವತ್ತು ಮಲೆನಾಡಿನಲ್ಲಿ ಒಂದು ಅಸೆಂಬ್ಲಿ ಕಾನ್ಸ್‌ಟ್ಟ್ಯೂಯೆನ್ಸಿಗೆ 3–3 ತಾಲ್ಲೂಕುಗಳಿವೆ. ಇದನ್ನೇನಾದರೂ ಒಪ್ಪಿಕೊಂಡರೆ ನಾಲ್ಕು ತಾಲ್ಲೂಕಿಗೆ ಒಬ್ಬೊಬ್ಬರು ಎಂ ಎಲ್ ಎ ಬರಬೇಕಾಗುತ್ತದೆ. ಯಾವ ಪಾಪಕ್ಕೋ, ಪುಣ್ಯಕ್ಕೋ ನಾನು ಚಿತ್ರದುರ್ಗ ಪಾರ್ಲಿಮೆಂಟ್ ಕಾನ್‌ಸ್ಟಿಟ್ಯೂಯೆನ್ಸಿಗೆ ಹೋಗಬೇಕಾಗುತ್ತದೆ. ಯಾಕೆಂದು ಗೊತ್ತಿಲ್ಲ. ಯಾರೋ ಬರೆದ ತೆವಲಿಗೆ, ಇವತ್ತಿ ಡ್ರಾಫ್ಟ್‌ನಲ್ಲಿ ಚಿಕ್ಕನಾಯಕನಹಳ್ಳಿ ಚಿತ್ರದುರ್ಗಕ್ಕೆ ಹೋಗಬೇಕಾಗಿದೆ. ಇದು ಯಾರನ್ನು ಮಟ್ಟ ಹಾಕಲಿಕ್ಕೆ? ಈ ನಿರ್ಧಾರಗಳನ್ನೆಲ್ಲಾ ಮಾಡುವುದು ಸರಿಯಾದ ವ್ಯವಸ್ಥೆಯೇ

ಎಂದು ಆಲೋಚನೆ ಮಾಡಬೇಕಾಗುತ್ತದೆ. ದಯಮಾಡಿ ಈ ಪ್ರಕ್ರಿಯೆಯನ್ನು ತಾವು ಏನು ಮಾಡಿದ್ದೀರಿ, ಇದನ್ನು ನಿಲ್ಲಿಸಬೇಕು. ಸರ್ಕಾರದವರು ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗಿ ಅವರಿಗೆ ಕನ್‌ವಿನ್ಸ್ ಮಾಡಿ ಇದನ್ನು ತಡೆಹಿಡಿಯುವಂಥ ಕೆಲಸ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, 1-9-04ರಲ್ಲಿ ನೀವು ಪತ್ರವನ್ನು ಬರೆದು ನಾಮಿನೇಷನ್‌ಅನ್ನು ಕಳುಹಿಸಿದ್ದೀರಿ. ನಾಲ್ಕು ದಿವಸಗಳ ಹಿಂದೆ ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ನಮಗೆ ಯಾವುದೇ ಮಾಹಿತಿಯನ್ನು ಕೊಡಲಿಲ್ಲ. ಇದಕ್ಕೆ ಯಾರ್ಯಾರು ಸದಸ್ಯರಾಗಿದ್ದಾರೆ, ಇವರನ್ನು ನೇಮಕ ಮಾಡಲು ಅನುಸರಿಸಿದಂಥ ಮಾನದಂಡವೇನು? ಮುಂತಾದ ಯಾವುದೇ ಮಾಹಿತಿಯನ್ನು ಕೊಡಲಿಲ್ಲ. ನಾವು ಕೆಲವು ರಾಷ್ಟ್ರೀಯ ಪಕ್ಷಗಳನ್ನು ಪ್ರತಿನಿಧಿಸತಕ್ಕಂಥ ಪ್ರತಿನಿಧಿಗಳು ಇಲ್ಲಿ ಇದ್ದೇವೆ. ನಮ್ಮನ್ನು ಏಕೆ ಇದರಲ್ಲಿ ಸೇರಿಸಲು ಆಗಲಿಲ್ಲ ಅಥವಾ ಅವರು ಐದು ಜನರು ಎಂದು ನಿಗದಿ ಮಾಡಿದ್ದಾರೆ. ಅಷ್ಟಕ್ಕೆ ಮಾತ್ರ ಕಳುಹಿಸಬೇಕು ಎಂದಾದರೂ ಕೂಡ, ಇಲ್ಲಿರುವ ರಾಷ್ಟ್ರೀಯ ಪಕ್ಷಗಳಿಗೆ ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ಅದನ್ನು ಬಿಟ್ಟು ನೀವು ಈಗಾಗಲೇ ಕಳುಹಿಸಿಬಿಟ್ಟಿದ್ದೀರಿ. ಕಳೆದ ವಾರ ಇಲ್ಲಿ ಚರ್ಚೆಯಾಗಿದೆ. ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಈ ಸದನಕ್ಕೆ ಈ ಬಗ್ಗೆ ಯಾವುದೇ ರೀತಿಯಾದಂಥ ಮಾಹಿತಿ ಇಲ್ಲ. ಇದರ ಪರಿಣಾಮ ಏನಾಗಬಹುದು ಎಂದು ನೀವು ದಯವಿಟ್ಟು ಆಲೋಚನೆ ಮಾಡಿ. ಏಕೆಂದರೆ ತಾವು ಇದರ ಸದಸ್ಯರಾಗಿದ್ದೀರಿ ಮತ್ತು ನಾಮಿನೇಷನ್ ಮಾಡಲು ತಮಗೇ ಅಧಿಕಾರ ಕೊಟ್ಟಿದ್ದಾರೆ. ನಾಮಿನೇಷನ್ ಮಾಡುವಂಥ ಸಂದರ್ಭದಲ್ಲಿ ಯಾವ ಆಲೋಚನೆಯನ್ನು ಮಾಡಿದ್ದಿರಿ, ಯಾವ ಮಾನದಂಡವನ್ನು ಅನುಸರಿಸಿದಿರಿ ಎನ್ನುವುದೇ ನಮಗೆ ನಿಜವಾಗಿಯೂ ಕೂಡ ಆತಂಕಕಾರಿಯಾದಂಥ ವಿಚಾರವಾಗಿದೆ. ದಯವಿಟ್ಟು ಇದನ್ನು ನೀವು ಮರುಪರಿಶೀಲನೆ ಮಾಡಬೇಕು. ಈ ಸಮಿತಿಯ ಬಗ್ಗೆಯೇ ನೀವು ಮರುಪರಿಶೀಲನೆ ಮಾಡಿ ಇದನ್ನು ಬದಲಾವಣೆ ಮಾಡಲು ತಾವು ಕ್ರಮ ತೆಗೆದುಕೊಳ್ಳಬೇಕು. ತಾವು ಎಲ್ಲಾ ರಾಷ್ಟ್ರೀಯ ಪಕ್ಷಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇದು ತುಂಬಾ ಗಂಭೀರವಾದಂಥ ವಿಚಾರ ಮತ್ತು ಕೋಟ್ಯಾಂತರ ಜನರ ರಾಜಕೀಯ ಭವಿಷ್ಯಕ್ಕೆ ಸಂಬಂಧಪಟ್ಟಂಥ ವಿಚಾರವಾಗುತ್ತದೆ. ಇದು ಯಾವುದೋ ಪಂಚಾಯತ್ ಎಲೆಕ್ಷನ್‌ಗೆ ಸಂಬಂಧಿಸಿದುದಲ್ಲ. ಇಂಥ ಸಂದರ್ಭದಲ್ಲಿ ತಾವು ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಇನ್ನೊಂದು ಸಮಸ್ಯೆ ಉದ್ಭವವಾಗುತ್ತದೆ. ಈ ಸಮಿತಿಯ ಬಗ್ಗೆ ವಿಶೇಷವಾಗಿ ಮಾನ್ಯ ಎಂಪಿ ಪ್ರಕಾಶ್‌ರವರು ಅನೇಕ ವಿಷಯಗಳನ್ನು ಹೇಳಿದರು ಮಹಿಳಾ ಮೀಸಲಾತಿ ವಿಧೇಯಕವನ್ನು ಈಗ ಪಾರ್ಲಿಮೆಂಟ್‌ನಲ್ಲಿ ಮಂಡಿಸುತ್ತಿದ್ದಾರೆ. ನನ್ನ ಗಮನಕ್ಕೆ ಬಂದ ಮಾಹಿತಿ ಪ್ರಕಾರ ಅದರಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದಾರೆಂದರೆ, ಈಗ ಇರುವ ಸೀಟಿಗಿಂತ, ಮಹಿಳಾ ಮೀಸಲಾತಿಗೆ ಪ್ರತ್ಯೇಕವಾಗಿ ಹೆಚ್ಚು ಸೀಟುಗಳನ್ನು ಮಾಡುತ್ತಾರೆ ಎನ್ನುವುದು ತಿಳಿದು ಬಂದಿದೆ. ಈ ಬಗ್ಗೆ ಚರ್ಚೆಯಾಗಿದೆ. ಅದು ಚರ್ಚೆಯಾದ ಮೇಲೆ, ಈಗ ಇಲ್ಲಿ ಏನು exercise ಮಾಡುತ್ತಿದ್ದೀರಿ it is going to be a futile exercise. ಇದು ಏನೂ ಪ್ರಯೋಜನವಾಗುವುದಿಲ್ಲ. ಒಂದು ವೇಳೆ ಹೆಚ್ಚು ಕ್ಷೇತ್ರಗಳನ್ನು

ಮಾಡಬೇಕಾದರೆ ಅಥವಾ ಇನ್ನೊಂದು ಕಡೆ ಡಬಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುತ್ತಾರಂತೆ. ಅದ್ಯಾವುದನ್ನಾದರೂ ಮಾಡಿದರೆ ನಿಮ್ಮ ಈ ಪ್ರಕ್ರಿಯೆ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕೋಸ್ಕರ 9ನೇ ತಾರೀಖು ಸಭೆ ಆಗಬೇಕೇ ಆಗಬಾರದೇ, ಎಂದು ಯೋಚನೆ ಮಾಡಬೇಕು. ಪಾರ್ಲಿಮೆಂಟ್‌ಸೆಷನ್ ಆದಮೇಲೆ ಏನು ತೀರ್ಮಾನ ತೆಗೆದುಕೊಳ್ಳುವುದಾದರೂ ಆಗ ತೆಗೆದು ಕೊಳ್ಳಬೇಕಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಇದರ ಬಗ್ಗೆ ತಾವೆಲ್ಲಾ ಸಲಹೆ ಕೊಟ್ಟಿದ್ದೀರಿ. ನಾನು ನಾಳೆಯೇ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳು, ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹಾಗೂ ಇತರ ನಾಯಕರ ಸಭೆ ಕರೆದು, ಇದರ ಬಗ್ಗೆ ಚರ್ಚೆ ಮಾಡಿ ಮುಂದೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಲೆಕ್ಷನ್ ಕಮಿಷನ್ ಜೊತೆ ಯಾವ ರೀತಿ ವ್ಯವಹರಿಸಿ ಏನು ಮಾಡಬೇಕು ಎನ್ನುವುದನ್ನು ನಿರ್ಧಾರ ಮಾಡುತ್ತೇನೆ. ನಾಳೆಯೇ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳ ಸಭೆಯನ್ನು ಕರೆಯುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಕಳುಹಿಸಿದಂಥ ಪಟ್ಟಿಯನ್ನು ಆಯೋಗ ಒಪ್ಪಿ, ಅದನ್ನು ಕನ್‌ಫರ್ಮ್ ಮಾಡಿ ಆಯೋಗದಿಂದ ನಿಮಗೆ ಲೆಟರ್ ಬಂದಿದೆಯಾ? ಅವತ್ತಿನಿಂದ ಇವತ್ತಿನವರೆಗೆ ಈ ಬಗ್ಗೆ ನಿಮಗೆ ಏನಾದರೂ ಉತ್ತರ ಬಂದಿದೆಯಾ ಎನ್ನುವ ಬಗ್ಗೆ ದಯಮಾಡಿ ಮಾಹಿತಿ ಬೇಕು. ನೀವು ಅವರಿಗೆ 1–9–2004ರಲ್ಲಿ ಪತ್ರ ಬರೆದಿದ್ದೀರಿ. With reference to your letter No. 282 DN/2004 1020 dated 27th August 2004. ಅಂದರೆ, 27ನೇ ಆಗಸ್ಟ್ 2004ರಂದು ಬರೆದ ಪತ್ರಕ್ಕೆ ನೀವು 1–9–2004ರಂದು ಈ 5 ಜನ ಸದಸ್ಯರನ್ನು ಸಮಿತಿಗೆ ನಾಮಿನೇಷನ್ ಮಾಡಿ ಪತ್ರ ಬರೆದಿದ್ದೀರಿ. ಅದಕ್ಕೇನಾದರೂ ಕನ್‌ಫರ್ಮ್ ಆಗಿ ಆ ಕಡೆಯಿಂದ ಪತ್ರ ಬಂದಿದೆಯಾ?

ಅಧ್ಯಕ್ಷರು : ನಾನು ಲೆಟರ್ ಬರೆದಿದ್ದೇನೆ. ಅಲ್ಲಿಂದ ಕನ್‌ಫರ್ಮೇಷನ್ ಲೆಟರ್ ಬಂದಿಲ್ಲ. 9ನೇ ತಾರೀಖು ಸಭೆ ಎಂದು ಸದಸ್ಯರಿಗೆ ಆಯೋಗದಿಂದ ಪತ್ರ ಬಂದಿದೆ ಅಷ್ಟೇ.

ಶ್ರೀ ಬಿ.ಎಸ್.ಯಡಿಯೂರಪ್ಪ : 9ನೇ ತಾರೀಖು ಸಭೆಗೆ ಯಾರು ಹೋಗಬೇಕು?

ಅಧ್ಯಕ್ಷರು : ಐದು ಜನರ ಹೆಸರುಗಳನ್ನು ನಾನು ಏನು ಕಳುಹಿಸಿದ್ದೇನೆ, ಅವರಿಗೆ ಈಗ 9ನೇ ತಾರೀಖು ಮೀಟಿಂಗ್ ಇದೆ ಎನ್ನುವುದು ಬಂದಿದೆಯೇ ಹೊರತು ಬೇರ್ಯಾವುದೇ ಲೆಟರ್ ಬಂದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಡೆಲ್ಲಿಯಿಂದ ಬಂದಿದೆಯಲ್ಲವೇ?

ಅಧ್ಯಕ್ಷರು : ಹೌದು ಡೆಲ್ಲಿಯಿಂದ ಬಂದಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ 5 ಜನರು 9ನೇ ತಾರೀಖು ಬರಬೇಕು ಎಂದು ನಿಮಗೆ ಪತ್ರ ಬಂದಿದೆಯೇ? ಏಕೆಂದರೆ, ನಮಗ್ಯಾರಿಗೂ ಬಂದಿಲ್ಲ. ಜಗದೀಶ್ ಶೆಟ್ಟರ್‌ರವರಿಗಾಗಲೀ, ನಮಗಾಗಲೇ ಪತ್ರ ಬಂದಿಲ್ಲ.

ಅಧ್ಯಕ್ಷರು : ನನಗೆ ಪತ್ರ ಬಂದಿದೆ. ಉಳಿದವರಿಗೆ ಬಂದಿದೆಯೋ ಏನೋ ಗೊತ್ತಿಲ್ಲ. ಮೊದಲು ನಾನು ಪತ್ರ ಬರೆದ ಮೇಲೆ ಅದಕ್ಕೆ ಕನ್‌ಫರ್ಮೇಷನ್ ಲೆಟರ್ ಏನೂ ಬರಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಸಭೆ ಕರೆದು ಕನ್ಸಲ್ಟೇಷನ್ ಮಾಡುವುದು ಯಾವುದಕ್ಕೆಂದರೆ, ನಮ್ಮ ರಾಜ್ಯವನ್ನು ಹೇಗೆ ವಿಂಗಡನೆ ಮಾಡಬೇಕು ಎನ್ನುವುದರ ಬಗ್ಗೆ ಸಲಹೆ ತೆಗೆದುಕೊಳ್ಳುವುದಕ್ಕೆ ನೀವು ಈ 5 ಜನರನ್ನು ಕರೆಯಬಹುದೇ ಹೊರತು, ಈಗಾಗಲೇ ನೀವು 5 ಜನರ ಹೆಸರನ್ನು ನಾಮಿನೇಟ್ ಮಾಡಿ ಕಳುಹಿಸಿದ್ದರೆ, ಅವರನ್ನು ಮೆಂಬರ್ ಎಂದು ಪರಿಗಣಿಸಿ 9ನೇ ತಾರೀಖು ಮೀಟಿಂಗಿಗೆ ಅವರನ್ನು ಕರೆದಿದ್ದರೆ, ಅವರು ಬಹಳ ದೂರ ಹೊರಟು ಹೋಗಿದ್ದಾರೆ ಎಂದಾಗುತ್ತದೆ. ಈಗ ನಾವು ಈ ಅನಾಹುತವನ್ನು ತಪ್ಪಿಸುವುದು ಹೇಗೆ? ಅದಕ್ಕಾಗಿಯೇ, ನಾನು ನಿಮ್ಮನ್ನು ಸಭೆಯನ್ನು ಕರೆಯಿರಿ, ಚರ್ಚೆ ಮಾಡೋಣ ಎಂದು ಹೇಳಿದ್ದು.

ಅಧ್ಯಕ್ಷರು : ನಾಳೆ ಸಭೆ ಕರೆಯುತ್ತೇನೆ ಬಿಡಿ. ಈಗ ಸಿ.ಟಿ. ರವಿಯವರು.

6. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಸಿ.ಟಿ. ರವಿ(ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳು ಮೇಲೆ ನನ್ನ ವಿಚಾರವನ್ನು ಮುಂದಿಡಲು ಅನುಮತಿ ಕೊಟ್ಟಂಥ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಒಳಾಡಳಿತ ಇಲಾಖೆಯ ಬಗ್ಗೆ ಮಾತನಾಡಲು ಬಯಸುತ್ತೇನೆ. "ಬಲಿಗೆ ನಳ್ಳಿ"ಯಲ್ಲಿ ಪೊಲೀಸ್ ಎನ್‌ಕೌಂಟರ್ ಆದನಂತರ ಮತ್ತು ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸರ ಹತ್ಯೆಯಾದ ನಂತರ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ನಕ್ಸಲ್ ಬೆಂಬಲಿಗರ ಸಂಘಟನೆಗಳ ನಿಷೇಧಕ್ಕೆ ಚಿಂತನೆ ನಡೆದಿದೆ, ನಕ್ಸಲೀಯರಿಗೆ ಬೆಂಬಲ ಆಗಿರತಕ್ಕಂಥ ಸಂಘಟನೆಗಳು ಯಾವ್ಯಾವಿವೆ ಎಂದು ನಮ್ಮ ಇಂಟೆಲಿಜೆನ್ಸ್‌ನವರು ಪಟ್ಟಿ ಮಾಡಿದ್ದಾರೆ, ಇದನ್ನು ಆಧರಿಸಿ, ನಕ್ಸಲ್ ಬೆಂಬಲಿತ ಸಂಘಟನೆಗಳನ್ನು ನಿಷೇಧ ಮಾಡುತ್ತೇವೆ ಎನ್ನುವ ಮಾತನ್ನು ಅವರು ಹೇಳಿದ್ದರು. ಆ ಮಾತನ್ನು ಹೇಳಿ ಮೂರು ತಿಂಗಳು ಕಳೆಯಿತು. ಯಾವ ಸಂಘಟನೆಗಳನ್ನು ನಿಷೇಧ ಮಾಡಿದ್ದಾರೆ? ಯಾರ ಮೇಲೆ ಕ್ರಮ ಕೈಗೊಂಡಿದ್ದಾರೆ? ಬೆಂಬಲಿಗರ ಮೇಲೆ ಯಾವಯಾವ ಕಾನೂನು ಕ್ರಮಗಳನ್ನು ಜರುಗಿಸಿದ್ದಾರೆ? ಏನು ಮಾಡಿದ್ದಾರೆ ಎನ್ನುವುದು ಈ ರಾಜ್ಯದ ಜನತೆಗೇನೂ ಗೊತ್ತಾಗಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ, ನಕ್ಸಲರ ರೆಕ್ರೂಟ್‌ಮೆಂಟ್ ಸೆಂಟರ್‌ಗಳಾಗಿ ಕಾರ್ಯ ನಿರ್ವಹಿಸುತ್ತಿರತಕ್ಕಂಥವು ಈ ರೀತಿಯ ಸಂಘಟನೆಗಳು. ನಕ್ಸಲರು ನೇರವಾಗಿ ಜನರ ಕೈಗೆ ಬಂದೂಕು ಕೊಟ್ಟು ನೀವು ವ್ಯವಸ್ಥೆಯ ವಿರುದ್ಧ ಹೋರಾಡಿ, ಬನ್ನಿ ಪ್ರಜಾಯುದ್ಧ ಮಾಡೋಣ ಎಂದು ಕರೆಯುವುದಿಲ್ಲ. ಬದಲಿಗೆ ಈ ರೀತಿಯ ಬೆಂಬಲಿಗ ಸಂಘಟನೆಗಳ ಮೂಲಕವೇ ತಮ್ಮ ಬೆಂಬಲಿಗರನ್ನು, ತಮ್ಮ ಕಾರ್ಯಪಡೆಯನ್ನು ಹೆಚ್ಚುಮಾಡಿಕೊಳ್ಳುತ್ತೇವೆ. ಜನರನ್ನು ಆರಿಸಿ, ಅಲ್ಲಿ ತರಬೇತಿ ಕೊಟ್ಟು ಇವತ್ತು ವ್ಯವಸ್ಥೆಯ ವಿರುದ್ಧದ ಹೋರಾಟದ ಹೆಸರಿನಲ್ಲಿ ಅಮಾಯಕರನ್ನು ಬಲಿಗೊಡುತ್ತಿರುವುದು ತಮಗೆ ಗೊತ್ತೇ ಇದೆ. ಹಾಗಾಗಿ, ಮುಖ್ಯಮಂತ್ರಿಗಳ ಹೇಳಿಕೆಯ ಗತಿ ಏನಾಯಿತೆಂದು ಕೇಳುತ್ತಿದ್ದೇನೆ. ಯಾರ ಮೇಲೆ ಕ್ರಮ ಕೈಗೊಂಡಿದ್ದಾರೆ? ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸರ ಹತ್ಯೆಯಾದ ನಂತರ, ನಕ್ಸಲ್ ಬೆಂಬಲಿಗರು ಭೂಗತರಾಗಿದ್ದಾರೆ ಎನ್ನುವ ವರದಿ ಬಂತು. ಆಗ ಭೂಗತರಾದವರೆಲ್ಲರೂ ಈಗ ಮತ್ತೆ ತಲೆ ಎತ್ತಿ ಓಡಾಡಲು ಪ್ರಾರಂಭ ಮಾಡಿದ್ದಾರೆ. ಪ್ರಾರಂಭಿಸಿದ್ದಾರೆ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಈ ಹಿನ್ನೆಲೆಯಲ್ಲಿ ಎಷ್ಟು